ಅದೇ ನೀತಿಯನ್ನೇ ಪ್ರತಿಷ್ಠಾಪನೆ ಮಾಡಿಕೊಳ್ಳುತ್ತಾ ಹೋಗುತ್ತಿದ್ದೇವೆ. ಹಣಕಾಸಿನ ವಿಷಯದಲ್ಲಿ, ಖರ್ಚಿನ ವಿಷಯವನ್ನು ನೋಡಿದರೆ ಅನೇಕ ವಿಷಯಗಳಿಗೆ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸುತ್ತಿರುವುದನ್ನು ನಾವು ನೋಡಿದ್ದೇವೆ. ಅನೇಕ ಸಂದರ್ಭಗಳಲ್ಲಿ ಕೋಟಿ ಗಟ್ಟಲೆ ಹಣವನ್ನು ಯೋಚನೆಯಿಲ್ಲದೆ ಉಪಯೋಗ ವಿಲ್ಲದ ಬಾಬುಗಳಿಗೆ ಖರ್ಚುಮಾಡುತ್ತಿದ್ದೇವೆ. ಅಂಥವರೀಗ 1½ ಕೋಟಿ ರೂಪಾಯಿಗಳನ್ನು ಈ ಪವಿತ್ರ ಕಾರ್ಯಕ್ಕಾಗಿ ಕಳೆದುಕೊಳ್ಳುವುದಕ್ಕೆ ಸಿದ್ಧವಾ ಗಿಲ್ಲವೆಂದರೆ ಏನು ಹೇಳೋಣ? ಮೂರು ಕೋಟಿ ರೂಪಾಯಿಗಳ ಡಿಫಿಸಿಟ್ ಹೊತ್ತಿರುವವರಿಗೆ ನಾಲ್ಕು ವರೆ ಕೋಟಿ ರೂಪಾಯಿಗಳ ಡಿಫಿಸಿಟ್ಟನ್ನು ಹೊರುವುದು ಕಷ್ಟವೇ? ಮನಸ್ಸೊಂದು ಮಾಡಿದರೆ ಅದನ್ನು ಯಾವ ರೀತಿಯಲ್ಲಾದರೂ ಸರಿದೂಗಿಸಬಹುದು. ಹೀಗಿರು ವಲ್ಲಿ ನಮ್ಮ ಪಾರ್ಟಿಯವರು ಈ ನಿರ್ಣಯದಮೇಲೆ ಮಾತನಾಡುವುದಕ್ಕಿಂತಲೂ ಪ್ರಜಾಸೋಷಿಯಲಿಸ್ಟ್ ಪಕ್ಷದ ಲೀಡರ್ ಆದ ಶ್ರೀಮಾನ್ ಇಮಾಂರವರು ಹೇಳಿದ ಮಾತುಗಳನ್ನು ಕೇಳಿದರೆ ಆಶ್ಚರ್ಯವಾಗುತ್ತದೆ. ಅದರಲ್ಲೂ ಪಾನನಿರೋಧವನ್ನು ದೇಶದಲ್ಲಿ ಜಾರಿಗೆ ತರಬೇಕು, ಕುಡಿತವನ್ನು ತಪ್ಪಿಸಬೇಕು ಎಂದು ಅವರ ಪಾರ್ಟಿಯವರೂ ಪ್ರತಿಪಾದನೆ ಮಾಡಿರುವಾಗ, ಜೊತೆಗೆ ಕೃಪಾಲನಿಯವರಂಥ ದೊಡ್ಡ ದೊಡ್ಡ ಮುಖಂಡರುಗಳು ಆ ಪಾರ್ಟಿಯಲ್ಲಿದ್ದರೂ ಅವರೆಲ್ಲಾ ಪಾಲಿಸಿಯನ್ನು ಶ್ರೀಮಾನ್ ಇಮಾಂರವರು ಚಿನ್ನದ ಗಣಿಯ ಪ್ರದೇಶದಲ್ಲಿ ಪಾನನಿರೋಧವನ್ನು ರದ್ದು ಮಾಡಬೇಕೆಂದು ವಾದಮಾಡಿದ್ದು ಬಹಳ ವಿಷಾದಕರ.

ಅಧ್ಯಕ್ಷರು.—ಅವರೇನೂ ನಿರ್ದಿಷ್ಟವಾಗಿ ಈ ನಿರ್ಣ ಯಕ್ಕೆ ಬೆಂಬಲ ಕೊಡುವುದಾಗಿ ಹೇಳಲಿಲ್ಲವಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅವರು ತಾವೇ ಲೀಡರ್ ಎಂದು ಒಂದು ರೀತಿ ಹೇಳುತ್ತಾರೆ. ಡೆಪ್ಯುಟಿ ಲೀಡರವರು ಇನ್ನೊಂದು ರೀತಿ ಹೇಳುತ್ತಾರೆ. ಯಾರದು ಸರಿಯೋ ಗೊತ್ತಿಲ್ಲ. ಅಂತೂ ಇಮಾಂರ ವರು ಏನೇ ಹೇಳಿರಲಿ, ಎಲ್ಲ ಪಾರ್ಟಿಯವರೂ ಪಾನ ನಿರೋಧವನ್ನು introduce ಮಾಡಬೇಕೆಂಬ ತತ್ವ ವನ್ನು ಅಂಗೀಕರಿಸಿದ್ದಾರೆ. ಅದನ್ನು ನಡೆಸಬೇಕಾದದ್ದು ಧರ್ಮ. ಅಲ್ಲದೇ ಶ್ರೀಮಾನ್ ವೆಂಕಟಪ್ಪನವರು ಹೇಳಿದಹಾಗೆ ಈ ನಿರ್ಣಯವನ್ನು move ಮಾಡಿದ ಮಾನ್ಯಸದಸ್ಯರೂ ಕೂಡ ತಮ್ಮ ನಿರ್ಣಯವನ್ನು ಪ್ರತಿಪಾದಿಸುವುದರಲ್ಲಿ ಈಗ ಪಾನನಿರೋಧವನ್ನು ಅರ್ಧಂಬರ್ಧ ಇಟ್ಟುಕೊಂಡಿರುವುದರಿಂದ ಏನು ಅನಾ ಹುತವಾಗುತ್ತಿದೆಯೆಂಬುದನ್ನು ಉದಹರಿಸಿ ತಮ್ಮ ವಾದವನ್ನು ಮುಂದಿಟ್ಟರು. ಅವರು ಹೇಳಿದ ವಾದ ದಲ್ಲಿಯೂ ಒಂದು ಅರ್ಥವಿದೆ. ಐದು ವರ್ಷಗಳಲ್ಲಿ ಜಾರಿಗೆತರುತ್ತೇವೆಂದು ಹೇಳಿಕೊಂಡು ಈ ವರ್ಷ ಅರ್ಧ ತಾಲ್ಲೂಕಿನಲ್ಲಿ ಮತ್ತೊಂದು ಐದು ವರ್ಷ ಇನ್ನೊಂದು ತಾಲ್ಲೂಕಿನಲ್ಲಿ ಎಂದು ಹೇಳುತ್ತಾ ಪೂರ್ತಿ ಜಾರಿಗೆ ತರಲು ಇನ್ನೂ ಮನಸ್ಸು ಮಾಡದಿರುವುದರಿಂದ ಮತ್ತು ಇಂಡಿಯಾ ಸರ್ಕಾರದವರು ಇದಕ್ಕಾಗಿ ಇಷ್ಟು ಹಣ ವನ್ನು ಕೊಡುತ್ತೇವೆಂದು ಗ್ಯಾರಂಟಿ ಕೊಡುವುದಾ ದರೆ ಯೋಚನೆ ಮಾಡುತ್ತೇವೆಂದು ಹೇಳಿದ ಮೇಲಂತೂ ಯಾರಿಗಾದರೂ ಬಹಳ ವ್ಯಸನವಾಗುತ್ತದೆ.

2 P.M.

ಇಂಡಿಯಾ ಸರ್ಕಾರದವರು ಹಣವನ್ನು ಕೊಡುತ್ತೇವೆ ಜಾರಿಮಾಡಿ ಎಂದು ಹೇಳಬೇಕಾದದ್ದೇ ಆಗಲಿ, ನಾವು ಕೇಳಬೇಕಾದದ್ದೇ ಆಗಲಿ ಯಾವ ಸಂದರ್ಭದಲ್ಲೂ ಬರುವುದಿಲ್ಲ. ಜಾರಿ ಮಾಡುವುದು ನಮ್ಮ ಕರ್ತವ್ಯ. ನಾವು ನಮ್ಮ ಕರ್ತವ್ಯ ನಿರ್ವಹಣೆ ಮಾಡುವುದಕ್ಕೆ ಶಕ್ತಿ ಇಲ್ಲದೆ ಅಥವಾ ಮನಸ್ಸಿಲ್ಲದೆ, ಇಂಡಿಯಾ ಸರ್ಕಾರದ ವರು ಆ ಹಣಕ್ಕೆ ಗ್ಯಾರಂಟಿ ಕೊಟ್ಟರೆ ಮಾಡುತ್ತೇವೆ ಎಂದು ಹೇಳುವುದು ನ್ಯಾಯವಾದದ್ದಲ್ಲ, ಹಾಗೆ ಹೇಳ ಬಾರದಾಗಿತ್ತು ಎಂದು ನಾನು ತಿಳಿಸಬೇಕಾಗಿದೆ. ಸರ್ಕಾರದವರು ಮನಸ್ಸು ಮಾಡಿದ್ದರೆ, ಅವರು ಇಷ್ಟು ಹೊತ್ತಿಗೇ, ಸಂಸ್ಥಾನಾದ್ಯಾಂತವೂ ಜಾರಿಗೆ ತರಬಹು ದಾಗಿತ್ತು. ಇದಕ್ಕೆ ಉದಾಹರಣೆ ಪಕ್ಕದ ಬೊಂಬಾಯಿ ಪ್ರಾಂತ್ಯ, ಮದರಾಸು ಪ್ರಾಂತ್ಯದಲ್ಲಿ ಏಕ್‌ದಂ ಜಾರಿಗೆ ತಂದಿರುವುದು ನಮ್ಮ ಕಣ್ಣು ಮುಂದೆ ಇದೆ, ನಾವು ಇದನ್ನು ನೋಡಿ, ತಿಳಿದೂ ಕೂಡ ಇಂಡಿಯಾ ಸರ್ಕಾರದವರು ಹಣವನ್ನು ಒದಗಿಸಿದರೆ ಆಮೇಲೆ ಯೋಚನೆ ಮಾಡಬಹುದು ಎಂದು ಹೇಳಿರುವುದರಲ್ಲಿ ಅರ್ಥವಿಲ್ಲ ಎನ್ನುವುದನ್ನು ಮಾತ್ರ ಹೇಳಬೇಕಾಗಿದೆ.

ಮತ್ತು ಈ ಪಾನನಿರೋಧವನ್ನು ಎಲ್ಲೆಲ್ಲಿ ಜಾರಿಗೆ ತಂದಿದ್ದಾರೋ ಆ ಪ್ರದೇಶದಲ್ಲೆಲ್ಲಾ ಕಳ್ಳಭಟ್ಟಿ ಸಾರಾಯಿ ತಯಾರುಮಾಡುವುದು ಬಹಳ ಜಾಸ್ತಿಯಾ ಗಿದೆ ಎಂದು ಅನೇಕರು ಹೇಳಿದ್ದಾರೆ. ಕಳ್ಳಭಟ್ಟಿ ಸಾರಾಯಿ ತಯಾರುಮಾಡುವುದು ಇದೆ. ಆದರೆ ಇದನ್ನು ಜಾರಿಗೆ ತಂದಕಾಲದಲ್ಲಿ ಎಷ್ಟು ಮಿತಿಮೀ ರಿತ್ತೋ, ಯಾವ ಪ್ರಮಾಣದಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರುಮಾಡುತ್ತಾ ಇದ್ದರೋ ಅಷ್ಟು ಇವೊತ್ತಿನ ದಿವಸ ಮಾಡುತ್ತಾ ಇಲ್ಲ ಎಂದು ಹೇಳಬಹುದು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಜಾಸ್ತಿ ಆಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಜಾಸ್ತಿಯಾ ಗಿದೆ ಎಂದು ಹೇಳುವಾಗ ಅನೇಕರು ಯಾವ ಅರ್ಥದಲ್ಲಿ ಹೇಳುತ್ತಾರೆ? ಕಳ್ಳಭಟ್ಟಿ ಸಾರಾಯಿ ಎಂದರೆ ಪೋಲೀಸ್‌ನವರು ಸೇರಿಕೊಂಡು ತಯಾರುಮಾಡು ವುದು ಕಳ್ಳಭಟ್ಟಿ ಎಂದು. ಪೋಲೀಸ್‌ನವರು ಎಲ್ಲಿ ತಯಾರಿಕೆಗೆ ಅವಕಾಶ ಕೊಟ್ಟಿದ್ದಾರೋ, ಎಲ್ಲಿ ಇದರ ವ್ಯಾಪಾರಕ್ಕೆ ಅವಕಾಶಮಾಡಿ ಕೊಟ್ಟಿ ದ್ದಾರೋ ಅಲ್ಲಿ ಹೆಚ್ಚಿರಬಹುದು ಅಷ್ಟೇ. ಎಲ್ಲಿ ಪೋಲೀಸ್‌ನವರು ದಕ್ಷತೆಯಿಂದ ಕೆಲಸಮಾಡುತ್ತಾ ಇದ್ದಾರೋ ಅಲ್ಲಿ, ಆ ಪೋಲೀಸ್‌ನವರು ದಕ್ಷತೆಯಿಂದ ಕೆಲಸ ಮಾಡತಕ್ಕ ಸಂದರ್ಭದಲ್ಲಿ ಅಂಥ ಪೋಲೀಸ್‌ನವರಿಗೆ ರಕ್ಷಣೆ ಕೂಡ ಸಿಕ್ಕುತ್ತಿಲ್ಲ. ಏಕೆಂದರೆ ದಕ್ಷತೆಯಿಂದ ಕೆಲಸಮಾಡುವುದಕ್ಕೆ ಹೋದರೆ ಅವನು ನಾಲ್ಕಾರು ಜನರ ಅವಿಶ್ವಾಸಕ್ಕೆ ಪಾತ್ರನಾಗಿ ಅವರ ಧಾಳಿಗೆ ಸಿಕ್ಕಿಬೀಳಬೇಕಾಗುತ್ತದೆ. ಮತ್ತು ಅವರು ಎಲ್ಲಿಯವರೆಗೂ ಹೋಗುತ್ತಾರೆ ಎಂದರೆ ಆ ಪೋಲೀಸ್‌ನವನನ್ನು ಲಂಚ ತಿಂದ, ಕಿರುಕುಳ ಕೊಡುತ್ತಾ ಇದ್ದಾನೆ ಎಂದು ಸರ್ಕಾರಕ್ಕೂ, Anti-corruption ಇಲಾಖೆಯವರಿಗೂ ದೂರು ಕೊಟ್ಟು ಅವನನ್ನು ಕೆಳಮಟ್ಟಕ್ಕೆ ತರುವ ಪರಿಸ್ಥಿತಿ ಇದೆ. ಆದ್ದರಿಂದ ಪೋಲೀಸ್ ಇಲಾಖೆಯಲ್ಲಿ ಸರಿಯಾದ ದಕ್ಷತೆ ಇದ್ದರೂ, ಪಾನನಿರೋಧವನ್ನು ಜಾರಿಗೆ ಕೊಡತಕ್ಕ ವರು ಒಬ್ಬರು, ನೋಡಿಕೊಳ್ಳತಕ್ಕವರು ಒಬ್ಬರು, ಹೀಗಾಗಿ ಏನಾಗಿದೆಯೆಂದರೆ ಪಾನನಿರೋಧ ಮಾಡಿ ದರೆ ಯಶಸ್ವಿಯಾಗಿ ಆಗುತ್ತದೆಯೋ ಇಲ್ಲವೋ ಎಂಬ ಅನುಮಾನ ಕೆಲವರ ಮನಸ್ಸಿನಲ್ಲಿ ಬಂದಿದೆ. ಆದ್ದ ರಿಂದ ಪೋಲೀಸ್‌ನವರಿಂದ ಇದನ್ನು ಜಾರಿ ಮಾಡಲು ಸಾಧ್ಯವೇ ಇಲ್ಲ ಎಂಬುದಾಗಿ ಕೂಡ ಕೆಲವರು ಹೇಳಿ ದ್ದಾರೆ. ಆ ರೀತಿ ಹೇಳಿದರೆ ಅದು ನಮ್ಮ ದಕ್ಷತೆ ಯನ್ನು ನಾವೇ ಹಳಿದುಕೊಂಡಹಾಗಾಗುತ್ತದೆ. ಅದು ಸರಿಯಾದದ್ದಲ್ಲ. ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿದೆ, ಪೋಲೀಸ್‌ನವರು ಮತ್ತು ಇದರ ಜವಾ

ಬ್ದಾರಿ ಹೊತ್ತಿರತಕ್ಕವರು ಮನಸ್ಸುಮಾಡಿದರೆ ಸಂಪೂರ್ಣವಾಗಿ ಈ ಕಳ್ಳಬಟ್ಟಿ ತಯಾರುಮಾಡುವುದೇನಿದೆಯೋ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಿದೆ. ಸರ್ಕಾರದವರು ನೀತಿಗೆ ಸಂಬಂಧಪಟ್ಟ ಈ ವಿಷಯದಲ್ಲಿ ಹೀಗೆ ಒಂದು ಭಾಗದಲ್ಲಿ ಮಾತ್ರ ತೆಗೆದುಹಾಕಿ ಎಂದು ಹೇಳುವ ಈ ನಿರ್ಣಯವನ್ನು ಒಪ್ಪಿ, ಕೈಬಿಡುವುದಕ್ಕೆ ಖಂಡಿತವಾಗಿಯೂ ಸಾಧ್ಯವಿಲ್ಲ. ಇದರಿಂದ ಪ್ರಯೋಜನವಾಗುತ್ತದೆ, ದೇಶಾದ್ಯಂತ prohibition ಜಾರಿಗೆ ತರಬೇಕು ಎಂದು ಒತ್ತಿಹೇಳಿ ಶ್ರೀಮಾನ್ ಸ್ವಾಮಿದೊರೈರವರು ಈ ನಿರ್ಣಯವನ್ನು ವಾಪಸು ತೆಗೆದುಕೊಳಬೇಕೆಂದು ಅವರನ್ನು ನಾನು ಪ್ರಾರ್ಥಿಸುತ್ತೇನೆ.

*Sri M. PALANIYAPPAN (Ulsoor).—I oppose the resolution moved by my friend Sri Swamidurai. He is quite aware that prohibition has done all along quite good to the people. But still he has moved this resolution. Therefore it is an election stunt. Elections are fast approaching and he wants that momentum is gathered in the area by just putting this resolution. He may just carry the cuttings in the papers and show them to the electorate and canvass for their support. I appeal to him that this is not the way of winning the election. It is not cheap popularity that will count in the long run. But the interests of the people at large he should think of and not merely the means by which he could win the election. After all that is not the criterion for a man to give this kind of false hopes in order to win election.

My friend Sri Thomas Sydney said that prohibition is not being properly enforced. Probably because he is holding a permit for himself, for his personal use, he feels that prohibition is not being strictly enforced.

Sri SYDNEY A. THOMAS.—True, I have got a permit but it is only to save me from consuming injurious liquors which are passed of as so called spirituos tonics.

Sri M. PALANIYAPPAN.—I would request the Hon'ble Home Minister to just tighten permits and other things. Naturally he would then feel that prohibition may be working properly.

The other argument advanced by some of my other friends is that illicit distillation is going on there. It is not so. Illicit distillation is going on not only in the K.G.F. but also in other parts where prohibition is introduced. But wherever possible you should see that offences prohibited by law are not committed. Such things cannot go on for any length of time. Sometimes some are caught. So likewise, when illicit distillation is known to be injurious to health, action has to be taken to see that it is put down. Wherever possible action is to be taken to prevent that. I do remember having met Sri Swamidurai in a conference at K.G.F. and I saw there that the city was kept clean and tidy. If anyone had seen K.G.F. before the introduction of prohibition and had seen it subsequently also, as we saw at the time the conference met, one would have noticed lot of difference. Before the introduction of prohibition, because people were mostly addicted to this evil, as my friend Sri Linga Reddy put it, it was most unclean and now. . . .

Sri SYDNEY A. THOMAS.—There s difference between drunkards and those who drink.

Sri M. PALANIYAPPAN.—A large number of people used then to drink and so the whole city was always full of trouble; there was a lot of confusion and chaos; and every time it was a problem for the Police to maintain law and order in the K.G.F. But after the introduction of prohibition, we could see that the city has been kept clean. All the people who work in the labour area feel more happy and prosperous. Not only Sri Swamidurai who comes from K.G.F. but also others who come from Kolar to the city have been saying that the labour population in the K.G.F. are prospering well. In view of this I would earnestly request my Hon'ble friend Sri Swamidurai to withdraw the resolution and allow the prohibition policy to continue.

ಶ್ರೀ ಟಿ ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಸಾಧಾರಣವಾಗಿ ಪದೇಪದೇ ಈ ಮದ್ಯಪಾನನಿರೋಧದ ವಿಷಯ ನಮ್ಮ ಶಾಸನ ಸಭೆಗಳಲ್ಲಿ ಬರತಕ್ಕದ್ದು ಬಹಳ ಆಶ್ಚರ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಯಾಕೆಂದರೆ ಈ ಮಂತ್ರಿಮಂಡಳ ಅಧಿಕಾರಕ್ಕೆಬಂದ ಪ್ರಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೂಡ ಈ ಪಾನನಿರೋಧದ ವಿಷಯದಲ್ಲಿ ಒಂದು ಹೆಜ್ಜೆಯಷ್ಟು ಕೂಡ ಹಿಂದೆ

(ಶ್ರೀ ಟಿ. ಹುವನುಯ್ಯ)

ಬೀಳುವುದಿಲ್ಲ ಎಂದು ಹೇಳಿದರು. ಆದರೆ ಇವೊತ್ತು ನೋಡಿದರೆ ನಾಲ್ಕು ವರ್ಷಗಳಾದರೂ ಕೂಡ ಒಂದು ಹೆಜ್ಜೆಯಷ್ಟೂ ಮುಂದೆ ಹೋಗಿಲ್ಲ ಎಂದು ಹೇಳಬೇಕಾಗಿದೆ. ಮುಖ್ಯವಾಗಿ ದೇಶದ ಹಿತದೃಷ್ಟಿಯಿಂದ, ಜನಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ನಾವು ಹಿಂದೆ ಈ ಮದ್ಯಪಾನದಿಂದ ಜನರು ಕಷ್ಟಪಡುತ್ತಾರೆ, ಜನರಿಗೆ ತೊಂದರೆಯಾಗುತ್ತಿದೆ, ಮನೆಮಠಗಳು ಹಾಳಾಗುತ್ತಿವೆ ಎಂದು ಹೇಳುತ್ತಿದ್ದವರು ಈ ಹೊತ್ತು ಅಧಿಕಾರದಲ್ಲಿದ್ದುಕೊಂಡು, 8-10 ವರ್ಷಗಳಾದರೂ ಕೂಡ ಮದ್ಯಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರದೆ ಇರುವುದು ಬಹಳ ವ್ಯಸನವನ್ನುಂಟುಮಾಡಿದೆ ಎಂದು ಹೇಳಬೇಕಾಗಿದೆ.

ಅಷ್ಟೇ ಅಲ್ಲದೆ ಕೆಲವುಕಡೆ ಮದ್ಯಪಾನನಿರೋಧ ಸರಿಯಾಗಿ ನಡೆದುಕೊಂಡು ಬರುತ್ತಿಲ್ಲವೆಂಬುದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಗಿದೆ. ಯಾಕೆಂದರೆ ನೂರಾರು ವರ್ಷಗಳಿಂದ ನಾವು ಒಂದ ಕಾನೂನು ಮಾಡಿದ್ದೇವೆ. ಆ ಕಾನೂನು ಬಹಳ ಸುಭದ್ರವಾಗಿ ನಡೆದುಕೊಂಡು ಬರುತ್ತಿದೆ. ಆದರೆ ಮದ್ಯಪಾನ ನಿರೋಧ ಜಾರಿಗೆ ಬಂದಿರತಕ್ಕ ಪ್ರದೇಶಗಳಲ್ಲಿ ಪೋಲೀಸಿನವರಿಗೆ ಈ ಕಾನೂನು ತಿಳಿದಿದೆಯೋ ಇಲ್ಲವೋ ನಮಗಂತೂ ಅರ್ಥವಾಗುತ್ತಿಲ್ಲ. ಅಂತೂ ಸುಖವಾಗಿ ನಡೆದುಕೊಂಡು ಬರುತ್ತಿದೆ. ಆದುದರಿಂದ ನಾವು ಏನು ತಿಳಿದುಕೊಳ್ಳಬೇಕು ಎಂದರೆ ನಮ್ಮ ಸರ್ಕಾರದವರು ಮಾಡಿರತಕ್ಕ ಕಾನೂನುಗಳು ಇಲಾಖೆಯವರಿಗೆ ಅರ್ಥವಾಗಿದೆಯೋ ಇಲ್ಲವೋ ಎಂಬ ಅನುಮಾನ ಬರುತ್ತಿದೆ ಎಂದು. ಹಿಂದಿನಿಂದ ಕುಡಿಯುತ್ತಿದ್ದವರ ಜೊತೆಗೆ ಕುಡಿಯದೆ ಇದ್ದವರೂ ಕೂಡ ಅಭ್ಯಾಸಮಾಡಿಕೊಂಡು ವ್ಯಾಪಾರ ದೃಷ್ಟಿಯಿಂದಲೂ ಈ ಕಸಬನ್ನು ಇಟ್ಟುಕೊಂಡು ಅದರಲ್ಲಿಯೂ ಲಾಭ ಪಡೆಯುತ್ತಿದ್ದಾರೆ. ಕಳ್ಳಭಟ್ಟಿ ಸಾರಾಯಿ ತಯಾರು ಮಾಡಿ ಹಣ ಸಂಪಾದನೆ ಮಾಡುತ್ತಿದ್ದಾರೆ. ಎಲ್ಲಿ ಪಾನನಿರೋಧವು ಜಾರಿಯಲ್ಲಿದೆಯೋ ಆ ಸ್ಥಳಗಳಿಗೆಲ್ಲ ಸೀಸೆಗಳಲ್ಲಿ ರವಾನೆ ಮಾಡುತ್ತಾರೆ.

ಶ್ರೀ ಎ. ಮುನಿಯಪ್ಪ (ಶಿಡ್ಲಘಟ್ಟ—ಚಿಕ್ಕಬಳ್ಳಾಪುರ—ಅನುಸೂಚಿತ ಜಾತಿಗಳು).—ಚಿಕ್ಕಬಳ್ಳಾಪುರದಲ್ಲಿ ಪೋಲೀಸಿನವರೇ ಈ ರೀತಿ ಮಾಡಿ ಸಿಕ್ಕಿಬಿದ್ದಿದ್ದಾರೆ.

ಶ್ರೀ ಟಿ. ಹನುಮಯ್ಯ.—ಆದುದರಿಂದ ಮುಖ್ಯವಾಗಿ ನಾವು ಮದ್ಯಪಾನನಿರೋಧಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೂ ಮತ್ತು ಗೃಹಸಚಿವರಿಗೂ ಕೂಡ ಅತಿ ವಿನಯದಿಂದ ಪ್ರಾರ್ಥನೆಮಾಡಿಕೊಳ್ಳುವುದು ಇಷ್ಟೆ. ಇದು ಹೆಚ್ಚಾಗಿ ನಡೆಯದಂತೆ ನೋಡಿಕೊಳ್ಳಬೇಕಾದದ್ದು ಬಹಳ ಅಗತ್ಯವಾದ ಕರ್ತವ್ಯ. ಅಷ್ಟೇ ಅಲ್ಲದೆ ಸ್ವಾತಂತ್ರ್ಯ ಬಂದು ಏಳೆಂಟು ವರ್ಷಗಳಾದರೂ ಕೂಡ, ಮದರಾಸು, ಬೊಂಬಾಯಿ ಪ್ರಾಂತಗಳಲ್ಲಿ ಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತಂದಿದ್ದರೂ ಸಹ ಇದುವರೆಗೂ ಕೂಡ ಮೈಸೂರು ದೇಶದಲ್ಲಿ ಜಾರಿಗೆ ತರದೆ ಇರುವುದು ಬಹಳ ಸೋಜಿಗ. ನಾನು ಇನ್ನೂ ಒಂದು ವಿಷಯವನ್ನು ಮಾನ್ಯ ಮಂತ್ರಿಗಳಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ತಾವುಗಳು ಸಂಚಾರ ಮಾಡತಕ್ಕ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಿಯಾದರೂ ಪಾನನಿರೋಧವನ್ನು ಜಾರಿಗೆ ಕೊಟ್ಟಿರುವುದರಿಂದ ತೊಂದರೆಯಾಗಿದೆಯಾದುದರಿಂದ ಪುನಃ ಅಂಗಡಿ ಕೊಡಿ ಎಂದು ಅರ್ಜಿಯನ್ನು ಕೊಟ್ಟು ಕೇಳಿದರೇ ಎಂಬುದನ್ನು ಹೇಳಿ. ಆದುದರಿಂದ ತಾವು ಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತಂದರೆ ಯಾವ ಪ್ರಜೆಯೂ ಕೂಡ ಅಂಗಡಿ ಇಟ್ಟುಕೊಡಿ ಎಂದು ಕೇಳುವುದಿಲ್ಲ. ಜೊತೆಗೆ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಪಟ್ಟಣಗಳಲ್ಲಿ ಕೂಡ ಕುಡಿಯತಕ್ಕ ಜನಗಳು ಬಹಳ ಸುಖವಾಗಿ ಶಾಂತತೆಯಿಂದ, ಜಮೀನು, ಮನೆಮಠಗಳನ್ನು ಮಾಡಿಕೊಂಡು ಬಹಳ ಸಂತೋಷವಾಗಿ ಇದ್ದಾರೆ. ಇನ್ನೂ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಅನೇಕ ಪಟ್ಟಣಗಳಲ್ಲಿ ಕುಡಿಯತಕ್ಕ ಜನಗಳು ಏನು ಮಾಡುತ್ತಿದ್ದರು ಎಂದರೆ ಹಗಲೆಲ್ಲ ದುಡಿದು ಕೆಲಸಮಾಡಿ ಸಾಯಂಕಾಲವಾಗುತ್ತಲೇ ಹೆಂಡತಿ ಮಕ್ಕಳು ಸಮೇತ ಕುಡಿದು, ದನಗಳ ಹಾಗೆ ಮನೆಮಾರು ಇಲ್ಲದೆ ಮರಗಳ ಕೆಳಗೋ, ಜೋಪಡಿಗಳಲ್ಲೋ ಬಿದ್ದಿರುತ್ತಿದ್ದರು. ಹೀಗೆಲ್ಲ ಕಷ್ಟಪಟ್ಟು ಪಾನಮಾಡುತ್ತಿದ್ದರು. ಈಗ ಪಾನನಿರೋಧ ಜಾರಿಗೆ ಬಂದಿರುವುದರಿಂದ ಎಲ್ಲೆಲ್ಲಿ ಜಾರಿಗೆ ಬಂದಿದೆಯೋ ಆ ಪ್ರದೇಶಗಳಲ್ಲೆಲ್ಲ ಜನರು ಮನೆಮಠಗಳನ್ನು ಹೊಂದಿ ಸುಖವಾಗಿದ್ದಾರೆ. ಇದನ್ನು ತಮಗೆಲ್ಲರಿಗೂ ಸಹ ತೋರಿಸುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಆದುದರಿಂದ ಶ್ರೀವರ್ಮಾ ಸ್ವಾಮಿ ದೊರೆಯವರು ತಂದಿರುವ ಹಾಗೆ ಪಾನನಿರೋಧವನ್ನು ತೊಡೆದೇಹಾಕಬೇಕು ಎಂದು ಯಾವ ಪ್ರಜೆಯೂ ಕೇಳುವುದಿಲ್ಲವೆಂದು ನಾನು ಹೇಳಬಯಸುತ್ತೇನೆ. ಆದುದರಿಂದ ಇದನ್ನು ಸರ್ಕಾರದವರು ಚೆನ್ನಾಗಿ ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ.

ಜೊತೆಗೆ ಶ್ರೀವರ್ಮಾ ಸ್ವಾಮಿದೊರೆಯವರು ತಂದಿರುವ ನಿರ್ಣಯವನ್ನು ನೋಡಿದರೆ ಬಹಳ ಆಶ್ಚರ್ಯ ಮತ್ತು ವ್ಯಸನವಾಗುತ್ತದೆ. ಏಕೆಂದರೆ ಒಂದು ದೃಷ್ಟಿಯಿಂದ ಕೋಲಾರದ ಗಣಿ ಪ್ರದೇಶದಲ್ಲಿ ಕಾರ್ಮಿಕರು ಬಹಳ ಕಷ್ಟಪಡುತ್ತಾರೆ. ಅವರ ಕಷ್ಟ ಪರಿಹಾರಕ್ಕಾಗಿಯಾದರೂ ಒಂದುಕಡೆ ಮದ್ಯಪಾನಕ್ಕೆ ಅವಕಾಶಕೊಡಿ ಎಂದು ಹೇಳಿದರೂ ಕೂಡ ದೇಶದಲ್ಲಿರತಕ್ಕ 90 ಭಾಗದ ಜನಗಳು ಸುಖವಾಗಿದ್ದರೆ, ಅವರೂ ಸಹ ಸುಖವಾಗಿರುತ್ತಾರೆ. ಆದುದರಿಂದ ಯಾವಾಗಲೂ ಕೂಡ ತಮ್ಮ ಸ್ವಂತ ಅಭಿಲಾಷೆ ಮಾತ್ರ ಇಟ್ಟುಕೊಂಡು ಚಿನ್ನದಗಣಿ ಪ್ರದೇಶದಲ್ಲಿ ಪಾನನಿರೋಧ ನೀತಿಯನ್ನು ರದ್ದುಮಾಡಿ, ಇತರ ಕಡೆಗಳಲ್ಲಿ ಇಟ್ಟುಕೊಳ್ಳಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಹಾಗೆ ಈ ನಿರ್ಣಯವನ್ನು ತಂದಿರುವುದು ಕೂಡ ಒಳ್ಳೆಯದಲ್ಲವೆಂದು ನಾನು ಹೇಳಬೇಕಾಗಿದೆ.

ಸರ್ಕಾರದವರು, ಕೇಂದ್ರ ಸರ್ಕಾರದವರು ನಮಗೆ ಹಣ ಕೊಟ್ಟಿಲ್ಲ, ಅದಕ್ಕೋಸ್ಕರ ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತಂದಿಲ್ಲ ಎಂದು ಹೇಳುತ್ತಾರೆ. ಈ ಹೊತ್ತು ನಮ್ಮ ಸರ್ಕಾರದಲ್ಲಿ ಏನು ಯೋಜನೆಗಳನ್ನು ತಯಾರುಮಾಡಿದರೂ ಅವೆಲ್ಲಕ್ಕೂ ಸಹ ದುಡ್ಡಿಲ್ಲ. ದುಡ್ಡನ್ನು ಕೇಂದ್ರ ಸರ್ಕಾರದಿಂದ ಅನೇಕ ಯೋಜನೆಗಳಿಗೆ ತೆಗೆದುಕೊಂಡೇ ಇರುತ್ತಾರೆ. ಖೋತಾ ಬಡ್ಜೆಟ್ಟನ್ನು ಮಾಡಿಯೇ ಮಾಡುತ್ತಾರೆ. ಆದುದರಿಂದ ಈ ನೆಪವನ್ನು ಹೇಳಿಕೊಂಡು, ಕೇಂದ್ರ ಸರ್ಕಾರದಿಂದ ದುಡ್ಡುಕೊಡುತ್ತಾರೆ, ಆಗ ನಿಲ್ಲಿಸುತ್ತೇವೆ ಎಂದು ಹೇಳುವ ವಾದದಲ್ಲಿ ತಿರುಳಿಲ್ಲ ಎಂದು ಹೇಳಬೇಕಾಗಿದೆ. ಹಿಂದಿನ ಸರ್ಕಾರವಿದ್ದಾಗ ಹರಿಜನರಿಗೆ ದೊಡ್ಡ ದೊಡ್ಡ ಅಧಿಕಾರಗಳನ್ನು ಕೊಡಿ, ಮಂತ್ರಿಗಳ ಕೆಲಸಕೊಡಿ ಎಂದು ಪ್ರಶ್ನೆಗಳನ್ನು ಕೇಳಿದಾಗಲೆಲ್ಲ ಹರಿಜನರಲ್ಲಿ ಅಂಥ ಅರ್ಹರಾದವರು ಯಾರೂ ಇಲ್ಲವೆಂದು ಅವರು ಹೇಳುತ್ತಿದ್ದರು. ಹಾಗೆಯೇ ಈಗಲೂ ಹೇಳಿದಹಾಗಾಗುತ್ತದೆ.

ಇಷ್ಟೇ ಅಲ್ಲ, ಇನ್ನೂ ಒಂದು ವಾದವನ್ನು ಹೇಳಬೇಕಾಗಿದೆ. ದೇಶದಲ್ಲಿ ಜನಗಳ ಆರೋಗ್ಯವನ್ನು

ಕಾಪಾಡಿಕೊಂಡು ಬರುವುದೇ ಸಂಪತ್ತು. ಆದುದರಿಂದ ನಾವು ಆರೋಗ್ಯದ ಕಡೆ ಗಮನಕೊಡಬೇಕೇ ಹೊರತು, ದುಡ್ಡು ನಮ್ಮಲ್ಲಿಲ್ಲ, ಕೇಂದ್ರ ಸರ್ಕಾರದವರು ಕೊಟ್ಟರೆ ಮಾಡುತ್ತೇವೆ ಎಂದು ಹೇಳುವ ವಾದ ಸರಿಯಾದದ್ದಲ್ಲ. ಈಹೊತ್ತು ಮದರಾಸು, ಬೊಂಬಾಯಿ ಪ್ರಾಂತಗಳಲ್ಲಿ ಪೂರ್ಣ ಪಾನನಿರೋಧವನ್ನು ಜಾರಿಗೆ ತಂದಿರುವಾಗ ನಮ್ಮ ಮೈಸೂರು ದೇಶದವರು ಇನ್ನೂ ಹಾಗೆಯೇ ನೋಡಿಕೊಂಡು ಇರತಕ್ಕದ್ದರಲ್ಲಿ ಅರ್ಥವಿಲ್ಲವೆಂದು ಹೇಳಬೇಕಾಗಿದೆ.

ಇಷ್ಟೇ ಅಲ್ಲದೆ ತಮಗೇನಾದರೂ ಈ ತತ್ವದಲ್ಲಿ ಅನುಮಾನವಿದ್ದರೆ ಪೂರ್ಣ ಪಾನನಿರೋಧವನ್ನು ಜಾರಿಗೆ ತರುವ ತತ್ವದಲ್ಲಿ ನಂಬಿಕೆ ನಿಮಗೆ ಇಲ್ಲವೆಂದರೆ ನಾವು ತಿಳಿಸಿ. ಅದನ್ನು ಯೋಚನೆಮಾಡೋಣ ಜೊತೆಗೆ ರಾಜ್ಯಾಂಗದ ಪ್ರಕಾರ ಪೂರ್ಣ ಪಾನನಿರೋಧವನ್ನು ಜಾರಿಗೆ ತರಬೇಕು ಎಂದುಕೂಡ ಇದೆ. ಆದರೆ, ಐದಾರು ವರ್ಷಗಳಾದರೂ ಸಹ ಇನ್ನೂ ತರದೆ ಇರುವುದು ಸರಿಯಾದದ್ದಲ್ಲ. ಮುಖ್ಯವಾಗಿ ದೇಶದ ಹಿತದೃಷ್ಟಿಯಿಂದ, ಜನಗಳ ಆರೋಗ್ಯ ದೃಷ್ಟಿಯಿಂದ, ದೇಶದಲ್ಲೆಲ್ಲಾ ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತರುವುದು ಬಹಳ ಒಳ್ಳೆಯದು. ಮತ್ತು ಚಿನ್ನದ ಗಣಿ ಪ್ರದೇಶದಲ್ಲಿ ಕೂಡ ಪಾನನಿರೋಧವನ್ನು ಮುಂದುವರಿಸುವುದು ಒಳ್ಳೆಯದು. ಶ್ರೀಮಾನ್ ಸ್ವಾಮಿದೊರೆಯವರು ತಾವು ಈಗ ತಂದಿರುವ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಒಂದೇ ಒಂದು ವಿಷಯವನ್ನು ಹೇಳಿ ನಾನು ನನ್ನ ಮಾತನ್ನು ನಿಲ್ಲಿಸುತ್ತೇನೆ. ಮುಖ್ಯವಾಗಿ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ, ಯಶಸ್ವಿಯಾಗಿ ನಡೆಸುವುದಕ್ಕೆ ಪೋಲೀಸ್ ಇಲಾಖೆಯವರೇ ಕಾರಣರು. ಮಾನ್ಯ ಮಂತ್ರಿಗಳಲ್ಲಿ ಮತ್ತೊಂದು ಸಲ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪೋಲೀಸು ಇಲಾಖೆಯವರು ಅವರ ಕರ್ತವ್ಯವನ್ನು ಮಾಡುತ್ತಿಲ್ಲವೆಂದು ಘಂಟಾಘೋಷವಾಗಿ ಹೇಳಬೇಕಾಗಿದೆ. ಪಾನನಿರೋಧವು ಪೂರ್ಣವಾಗಿ ಜಾರಿಗೆ ಬರದೆ ಇರುವುದಕ್ಕೆ ಪೋಲೀಸಿನವರು ಅನೇಕ ಕಡೆಗಳಲ್ಲಿ ಮಾಮೂಲುಗಳನ್ನು ಪಡೆಯುತ್ತಿದ್ದಾರೆ. ಇದೂ ಒಂದು ಕಾರಣ. ಆದುದರಿಂದ ಬಹಳ strict instructions ಕೊಟ್ಟು ಪಾನನಿರೋಧವನ್ನು ಯಶಸ್ವಿಗೊಳಿಸಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿ ನನ್ನ ಮಾತುಗಳನ್ನು ನಿಲ್ಲಿಸುತ್ತೇನೆ.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಪ್ರಜಾಧಿಕಾರ ಶಾಖೆಯ ಮಂತ್ರಿಗಳು).—ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀಮಾನ್ ಸ್ವಾಮಿದೊರೈ ಅವರು ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲ ಪಾನನಿರೋಧ ಜಾರಿಯಲ್ಲಿರುವುದನ್ನು ತೆಗೆದುಹಾಕಬೇಕೆಂಬ ರೀತಿಯಲ್ಲಿ ಈ ನಿರ್ಣಯವನ್ನು ಸಭೆಯಮುಂದೆ ಮಂಡಿಸಿದ್ದಾರೆ. ಮದರಾಸು ಪ್ರಾಂತದಲ್ಲಿ 1948ನೆಯ ಇಸವಿಗೆ ಮುಂಚಿತವಾಗಿ ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ. ಆ ಪ್ರಾಂತದವರು ಮದರಾಸು ಪ್ರಾಂತದ ಅಕ್ಕಪಕ್ಕದಲ್ಲಿರುವ ಮೈಸೂರು ಸಂಸ್ಥಾನದ ಪ್ರಾಂತಗಳಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಮೈಸೂರು ಸರ್ಕಾರದವರನ್ನು ಒತ್ತಾಯಪಡಿಸಿದರು. ಆ ಕಾರಣದಿಂದಲೂ ಮತ್ತು ಗಣಿ ಪ್ರದೇಶದಲ್ಲಿ ವಾಸಮಾಡತಕ್ಕ ಸಾವಿರಾರು ಕೂಲಿಗಾರರ ಹಿತದೃಷ್ಟಿಯಿಂದಲೂ ಸರ್ಕಾರದವರು ಅದನ್ನು ಬಹಳ ಕೂಲಂಕಷವಾಗಿ ಯೋಚನೆಮಾಡಿ ಅದಕ್ಕಾಗಿ ಒಂದು ಸಮಿತಿಯನ್ನು ಕೂಡ ಏರ್ಪಾಡುಮಾಡಿ ಅವರು ಮೊಟ್ಟಮೊದಲನೆಯದಾಗಿ ಕೋಲಾರ ಡಿಸ್ಟ್ರಿಕ್ಟು, ತುಮಕೂರು ಡಿಸ್ಟ್ರಿಕ್ಟು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟು ಈ ಡಿಸ್ಟ್ರಿಕ್ಟುಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದರು. ಅಗಿನಿಂದಲೂ ಕೂಡ ಪಾನನಿರೋಧ ಪದ್ಧತಿ ಚೆನ್ನಾಗಿ ಕೆಲಸಮಾಡುತ್ತಿದೆಯೆಂಬುದನ್ನು ಈ ಮಾನ್ಯ ಸಭೆಯಲ್ಲಿ ಹೇಳಿದ್ದೇನೆ. ಆದರೂ ಕೂಡ ಕೆ. ಜಿ.ಎಫ್. ಪ್ರದೇಶದಲ್ಲಿ ಸರಿಯಾದ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಇದನ್ನು ಮಾಡಿಲ್ಲ, ಪೋಲೀಸಿನವರು ಚೆನ್ನಾಗಿ ಬಂದೊಬಸ್ತಿನಲ್ಲಿಟ್ಟಿಲ್ಲ, ಇಲ್ಲಿಸಿಟ್ ಡಿಸ್ಟಿಲೇಷನ್ ಮನೆಮನೆಯಲ್ಲೂ ತಯಾರಾಗಿ ಬಹುಮಂದಿ ಕುಡಿಯುತ್ತಿದ್ದಾರೆ ಎಂದು ಅನೇಕ ಮಾನ್ಯ ಸದಸ್ಯರು ಸಭೆಯ ಮುಂದೆ ತಿಳಿಸಿದ್ದಾರೆ. ಆದರೆ ಇನ್ನೂ ಕೆಲವು ಮಾನ್ಯ ಮಿತ್ರರಾದರೂ ಪಾನನಿರೋಧ ಪದ್ಧತಿಯನ್ನು ಜಾರಿಗೆ ತಂದುದರ ದೆಸೆಯಿಂದ ಅನೇಕ ಸಂಸಾರಗಳಿಗೆ ಅದರಲ್ಲೂ ಬಹಳ ಹಿಂದುಳಿದ ಪಂಗಡದವರಿಗೆ, ನಾನಾ ತರಗತಿಯವರಿಗೆ ಮತ್ತು ಬಡ ಸಂಸಾರಗಳಿಗೆ ಎಷ್ಟೋ ಸಹಾಯವಾಗಿದೆ, ಅವರ ಆರ್ಥಿಕ ಸ್ಥಿತಿಯನ್ನು ಮತ್ತು ನೈತಿಕ ಮಟ್ಟವನ್ನು ಎಷ್ಟೋ ವಿಧವಾಗಿ ಹೆಚ್ಚಿಸಿದೆ ಎಂಬ ವಿಷಯವನ್ನು ಬಹಳ ಸಂತೋಷದಿಂದ ತಿಳಿಸಿದ್ದಾರೆ. ಈಗ ಈ ಪದ್ಧತಿಯನ್ನು ಸುಮಾರು ಆರು ಡಿಸ್ಟ್ರಿಕ್ಟುಗಳಲ್ಲೂ ಮತ್ತು ಆರು ತಾಲ್ಲೂಕುಗಳಲ್ಲೂ ಜಾರಿಗೆ ತಂದಿದೆ. ಆ ಪ್ರದೇಶಗಳಲ್ಲಿ ಈ ಕಾನೂನು ಕೆಲಸ ಮಾಡುತ್ತಿದೆ, ಬಹುಮಂದಿ ಈ ಕಾನೂನನ್ನು ಸರ್ಕಾರದವರು ಜಾರಿಗೆ ತಂದಿದ್ದಾರೆಂಬ ಭಯದಿಂದ, ಅಥವಾ ಪೋಲೀಸಿನವರಾಗಲಿ ಅಥವಾ ಅಕ್ಕಪಕ್ಕದವರಾಗಲಿ ಅಕಸ್ಮಾತ್ತಾಗಿ ನೋಡಿಯಾರು ಎಂಬ ಭಯದಿಂದ, ಅಕಸ್ಮಾತ್ತಾಗಿ ಕುಡಿದು ದಾರಿಗಳಲ್ಲಿ ಹೋಗುತ್ತಿದ್ದಾಗ ಸಿಕ್ಕಿಬಿದ್ದೇವು ಎಂಬ ಭಯ ಮತ್ತು ಸಂಶಯಗಳಿಂದಲಾದರೂ ಕುಡಿಯುವುದನ್ನು ಎಷ್ಟೋ ನಿಲ್ಲಿಸಿದ್ದಾರೆ, ಕಾನೂನು ಪ್ರಕಾರ ಶಿಕ್ಷೆ ಮಾಡುತ್ತಾರೆಂಬ ಭಯವಾದರೂ ಕೂಡ ಈಗ ಆ ಪ್ರದೇಶಗಳಲ್ಲಿದೆ. ಹಿಂದೆ ಹಾಗಿರಲಿಲ್ಲ. ಹಿಂದೆ ಅನೇಕ ಮಂದಿ ಅದರಲ್ಲೂ ಬಡತನದಲ್ಲಿದ್ದವರು ಪ್ರತಿನಿತ್ಯವೂ ಕೂಲಿಮಾಡಿ ಜೀವನ ಮಾಡುತ್ತಿದ್ದವರು ದಿನಕ್ಕೆ ಒಂದು ರೂಪಾಯಿ ಮನೆಯ ಯಜಮಾನ ಸಂಪಾದಿಸಿದರೆ ಅದರಲ್ಲಿ ಸುಮಾರು ಹನ್ನೆರಡಾಣೆಗಳನ್ನಾದರೂ ಪಾನಕ್ಕಾಗಿ ಖರ್ಚು ಮಾಡುತ್ತಿದ್ದರು, ಸಂಪಾದಿಸಿದ ಪ್ರತಿ ವಾರದ ಕೂಲಿಯಲ್ಲಿ ಮುಕ್ಕಾಲು ಭಾಗ ಹಣವನ್ನು ಕುಡಿತಕ್ಕಾಗಿ ಖರ್ಚುಮಾಡಿ ಕಾಲುಭಾಗ ಉಳಿದುದರಲ್ಲಿ ಸುಮಾರು ನಾಲ್ಕೈದು ಜನರಿರುವ ಸಂಸಾರದ ಜೀವನವನ್ನು ನಡೆಸುತ್ತಿದ್ದರು. ಹಿಂದೆ ಕುಡಿತದಿಂದ ಎಷ್ಟು ಕಷ್ಟವಾಗಿತ್ತೆಂಬುದು ಎಲ್ಲರೂ ಯೋಚನೆ ಮಾಡತಕ್ಕ ವಿಚಾರವಾಗಿದೆ. ಇಷ್ಟೇ ಅಲ್ಲ, ಅವರು ಜೀವನಕ್ಕಾಗಿ ಬಹಳ ತೊಂದರೆ ಪಡುತ್ತಿದ್ದರು, ಬಟ್ಟೆಗಿಲ್ಲದೆ ತೊಂದರೆ ಪಡುತ್ತಿದ್ದರು, ಹೊಟ್ಟೆಗಿಲ್ಲದೆ ತೊಂದರೆ ಪಡುತ್ತಿದ್ದರು ಮತ್ತು ಸಾಧಾರಣವಾಗಿ ಮಾನ ಮರ್ಯಾದೆಯಿಲ್ಲದೆ ವರ್ತಿಸುತ್ತಿದ್ದರು, ಅತಿಯಾಗಿ ಕುಡಿದು ದಾರಿಯಲ್ಲಿ ಬೀದಿಗಳಲ್ಲಿ ಹುಚ್ಚಾಪಟ್ಟೆ ವರ್ತಿಸುತ್ತಿದ್ದ ನಿದರ್ಶನಗಳನ್ನು ತಾವೂ ಮತ್ತು ಇನ್ನೂ ಅನೇಕರು ನೋಡುತ್ತಿದ್ದುದು ಎಲ್ಲರಿಗೂ ಗೊತ್ತಿದೆ. ಮಹಾತ್ಮ ಗಾಂಧಿಯವರು ಇಂಥ ದೃಶ್ಯಗಳನ್ನು ನೋಡಿ ಇದರ ಕಷ್ಟನಷ್ಟಗಳನ್ನು ಚೆನ್ನಾಗಿ ಅರಿತು ಮೊಟ್ಟಮೊದಲು ಪಾನನಿರೋಧವನ್ನು ಜಾರಿಗೆ ತರಬೇಕು, ಕಾಂಗ್ರೆಸ್ ಸರ್ಕಾರ ಅದಕ್ಕೆ ತಕ್ಕ ನೀತಿಯನ್ನನುಸರಿಸಬೇಕು ಎಂದು ಒತ್ತಾಯಮಾಡಿ ಹೇಳಿದ್ದರು. ಅದೇ ಪ್ರಕಾರವಾಗಿ ನಮ್ಮ ಸರ್ಕಾರದವರೂ ಕೂಡ ಸಾಧ್ಯವಾದಷ್ಟು ಮಟ್ಟಿಗೆ ಕ್ರಮಕ್ರಮೇಣ ಜಾರಿಗೆ ತರಬೇಕೆಂದು ನಮ್ಮ

(ಶ್ರೀ ಟಿ. ಚನ್ನಯ್ಯ.)

ಮೈಸೂರು ಸಂಸ್ಥಾನದಲ್ಲಿ ಕೆಲವು ಪ್ರದೇಶಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ನಾಲ್ಕು ವರ್ಷಗಳಿಂದ ಕ್ರಮಕ್ರಮೇಣ ಎಲ್ಲಿ ಜಾರಿಗೆ ತಂದಿದ್ದೀರಿ ?

ಶ್ರೀ ಟಿ. ಚನ್ನಯ್ಯ.—ಹಾಸನ ಜಿಲ್ಲೆಯ ಆಲೂರು ಮತ್ತು ಅರಕಲಗೂಡು ತಾಲ್ಲೂಕುಗಳಲ್ಲಿ ಈ ಪದ್ಧತಿ ಜಾರಿಗೆ ತಂದಿದೆ; ಒಟ್ಟು ಹತ್ತು ಜಿಲ್ಲೆಗಳಲ್ಲಿ ಆರು ಜಿಲ್ಲೆಗಳಲ್ಲೂ ಮತ್ತು ಆರು ತಾಲ್ಲೂಕುಗಳಲ್ಲೂ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ಪದ್ಧತಿಯನ್ನು ಜಾರಿಗೆ ತಂದಿರುವುದರ ದೆಶೆಯಿಂದ ಅನೇಕ ಬಡ ಸಂಸಾರಗಳಿಗೆ, ಬಡತನದಲ್ಲಿ ನರಳುತ್ತಿರುವವರಿಗೆ, ಕೂಲಿ ನಾಲಿಯಿಂದ ಜೀವನ ಮಾಡುವವರಿಗೆ ಎಷ್ಟು ಮಟ್ಟಿಗೆ ಅನುಕೂಲವಾಗಿದೆಯೆಂಬುದನ್ನು ಅನೇಕರು ಈಗ ಕಾಣುತ್ತಿದ್ದಾರೆ. ನಮ್ಮ ಕೋಮಿನವರಾದ ಅನೇಕ ಮಾನ್ಯ ಸದಸ್ಯರು ಈ ವಿಷಯದಲ್ಲಿ ಕೈಗೊಂಡಿರುವ ಕಾರ್ಯಕ್ರಮವನ್ನು ಬಹಳ ಸಂತೋಷದಿಂದ ಸ್ವಾಗತಿಸಿದ್ದಾರೆ. ಬಹುಮಂದಿ ಹರಿಜನ ಸಂಸಾರಿಗಳು ಕುಡಿದು ತಮ್ಮ ಆರ್ಥಿಕ ಸ್ಥಿತಿಯನ್ನು ಬಹಳ ಹೀನಸ್ಥಿತಿಗೆ ತಂದುಕೊಂಡಿರುವುದನ್ನು ಕೆಲವು ಮಾನ್ಯ ಸದಸ್ಯರು ಕಣ್ಣಾರೆ ನೋಡಿರುವುದರ ದೆಶೆಯಿಂದ ಅವರು ಇಷ್ಟು ತೀವ್ರವಾಗಿ ಅದರ ವಿಷಯದಲ್ಲಿ ಮಾತನಾಡಿದ್ದಾರೆ. ಇದಕ್ಕಾಗಿಯೇ ಈ ಪದ್ಧತಿಯನ್ನು ಪೂರ್ಣವಾಗಿ ನಮ್ಮ ಸಂಸ್ಥಾನದಲ್ಲೆಲ್ಲಾ ಜಾರಿಗೆ ತರಬೇಕೆಂದು ಅವರು ಒತ್ತಾಯ ಮಾಡುತ್ತಿದ್ದುದು; ಕಾರಣವಿಲ್ಲದೆ ಒತ್ತಾಯ ಮಾಡಿಲ್ಲ. ಯಾವಾಗಲೂ ಕೂಡ ಕಷ್ಟಸುಖಗಳನ್ನು ಅನುಭವಿಸುವವರು ಸಾಮಾನ್ಯವಾಗಿ ಹೆಚ್ಚಿನ ರೀತಿಯಲ್ಲಿ ಒತ್ತಾಯಮಾಡುವುದು ಸ್ವಾಭಾವಿಕ, ಬಹುಶಃ ಕೆ.ಜಿ.ಎಫ್.ನಿಂದ ಬಂದಿರುವ ಶ್ರೀ ಸ್ವಾಮಿದೊರೈ, ಶ್ರೀ ಥಾಮಸ್, ಶ್ರೀ ಮಾರ್ಕ ಮುಂತಾದವರು ಅಲ್ಲಿನ ಸನ್ನಿವೇಶ ನೋಡಿ ನಿರ್ಣಯ ಕಳಿಸಿ, ಒತ್ತಾಯ ಮಾಡುತ್ತಿರಬಹುದು. ಅಲ್ಲಿ ಸುಮಾರು 20-25 ಸಾವಿರ ಮಂದಿ ಗಣಿಯಲ್ಲಿ ಕೆಲಸ ಮಾಡುವವರಿದ್ದಾರೆ. ಬಹಳ ವರ್ಷಗಳಿಂದ ಕೂಲಿ ಕೆಲಸ ಮಾಡಿ ಬಂದ ಹಣದಲ್ಲಿ ಬಹಳ ಭಾಗ ಕುಡಿತಕ್ಕಾಗಿ ಖರ್ಚುಮಾಡಿ ಗಣಿ ಪ್ರದೇಶದಲ್ಲಿ ಈಗಾಗಲೇ ಅನೇಕವಾಗಿ ಆರ್ಥಿಕ ಮಟ್ಟದಲ್ಲಿ ಹೀನಸ್ಥಿತಿಗೆ ಬಂದಿರುವ ಸಂಸಾರಗಳು ಬಹಳವಾಗಿವೆ. ಕುಡಿತ ಈಗ ತಪ್ಪಿದನಂತರ ಕೆಲವುಮಂದಿ ಉತ್ತಮಗೊಂಡಿರುವುದು ಸಹ ಕಂಡುಬರುತ್ತಿದೆ. ಆದರೆ ಆ ಪ್ರದೇಶದಲ್ಲೇ ಹಿಂದಿನಿಂದಲೂ ವಾಸಮಾಡಿಕೊಂಡಿರುವುದರಿಂದ ಮತ್ತು ಕುಡಿತದ ಅಭ್ಯಾಸ ಬಹಳ ದಿವಸಗಳಿಂದ ಇದ್ದುದರಿಂದ ಈಗಲೂ ಕೆಲವರು ಒಂದು ತರಹದಲ್ಲಿ ಕುಡಿಯಲು ಪ್ರಯತ್ನ ಮಾಡುತ್ತಿರಬಹುದು. ಅದನ್ನು ತಪ್ಪಿಸಲು ಈಗ ಈ ನಿರ್ಣಯ ತಂದಿರುವುದನ್ನು ಒಪ್ಪುತ್ತೇನೆ. ಸರ್ಕಾರದವರೂ ಕೂಡ ಒಂದು ನೀತಿಯನ್ನು ಹಾಕಿಕೊಂಡಿದ್ದಾರೆ. ರಾಜ್ಯಾಂಗ ರಚನೆಯಲ್ಲಿ ಕೂಡ ವಿಧಾಯಕವಾಗಿರುವಂತೆ. . . .

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಸದಸ್ಯರನೇಕರು ಏಳೆಂಟು ವರ್ಷಗಳಿಂದಲೂ ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳುತ್ತಿದ್ದರೂ ಸಹ ಸರ್ಕಾರದವರು ಹಾಗೆ ಜಾರಿಗೆ ತಂದಿಲ್ಲದಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಎಲ್ಲರೂ ಹಾಗೆ ಹೇಳಲಿಲ್ಲ. ಎಲ್ಲರೂ ಹಾಗೆ ಹೇಳಿದ್ದರೆ ಈ ಸಂದರ್ಭವೇ ಬೇರೆಯಾಗಿರುತ್ತಿತ್ತು.

ಶ್ರೀ ಕೆ. ಪ್ರಭಾಕರ್.—ಎಲ್ಲರೂ ಹಾಗೆ ಹೇಳಲಿಲ್ಲ ಎಂದು ಹೇಳುತ್ತೀರಲ್ಲ ಇದು ಬೇಕೆಂದು ಕೇಳಿರತಕ್ಕವರಾದರೂ ಯಾರು ?

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ನಾನು ಒಂದು ವಿಚಾರವನ್ನು ತಿಳಿಸಲು ಅವಕಾಶ ನೀಡಬೇಕೆಂದು ಬೇಡಿಕೊಳ್ಳುತ್ತೇನೆ. ಈಗತಾನೆ ಮಾನ್ಯ ಮಂತ್ರಿಗಳು ಹೇಳಿದ ಮಾತನ್ನು ಕೇಳಿ ನನ್ನ ಮನಸ್ಸಿಗೆ ಬಹಳ ನೋವುಂಟಾಯಿತು. ಆದಕಾರಣ ನಾನೀಗ ನಮ್ಮ ಸರ್ಕಾರದವರನ್ನು ಈ ದಿವಸ ಇವರು ಕಟ್ಟಿರತಕ್ಕಂಥ ರಾಜ್ಯವನ್ನು ಯಾವ ತಳಹದಿ ಮೇಲೆ ಕಟ್ಟಿದ್ದಾರೆಂಬುದನ್ನು ಕೇಳಬೇಕಾಗಿದೆ. . . .

ಶ್ರೀ ಟಿ. ಚನ್ನಯ್ಯ.—ಶ್ರೀ ಡಿ. ಎಂ. ಗೋವಿಂದರಾಜು ಅವರೂ ಮತ್ತು ಶ್ರೀಮತಿ ಸಿದ್ದಮ್ಮನವರೂ ಕೇಳುತ್ತಿರುವ ಪ್ರಶ್ನೆಗಳನ್ನು ನಿಜವಾಗಿಯೂ ಅವರು ಒಳ್ಳೆಯ ಉದ್ದೇಶದಿಂದಲೇ ಕೇಳಿರುತ್ತಾರೆ. ಅವರು ಈ ತತ್ವವನ್ನೇನೂ ವಿರೋಧ ಮಾಡುವುದಕ್ಕೆ ಹೋಗಿಲ್ಲ. ಈ ಎಲ್ಲಾ ಮಾನ್ಯ ಸದಸ್ಯರುಗಳೂ ಯಾವ ಒಂದು ಒಳ್ಳೆಯ ಘನೋದ್ದೇಶವನ್ನಿಟ್ಟುಕೊಂಡು ಮಾತನಾಡುತ್ತಿದ್ದಾರೋ ಅದೇ ಉದೇಶ ನಮ್ಮ ಸರ್ಕಾರಕ್ಕೆ ಇದೆ. ಆದರೆ ಈ ಪ್ರಶ್ನೆಯನ್ನು ಬಗೆಹರಿಸತಕ್ಕ ಮಾರ್ಗದಲ್ಲಿ ಅನೇಕ ತೊಡಕುಗಳಿವೆ. ಅಲ್ಲದೆ ಇದೊಂದು ನಮ್ಮ ಕಾಂಗ್ರೆಸ್ ಪಾರ್ಟಿಯ ನೀತಿ ಮತ್ತು ಪಾಲಿಸಿಯ ಪ್ರಶ್ನೆಗೆ ಸಂಬಂಧ ಪಟ್ಟಿದ್ದಾಗಿರುತ್ತದೆ. ಈ ತತ್ವವನ್ನು ದೇಶಾದ್ಯಂತವೂ ಜಾರಿಗೆ ತರಬೇಕೆಂಬ ನೀತಿಯನ್ನು ಕಾಂಗ್ರೆಸ್ ಸಂಸ್ಥೆ ಒಪ್ಪಿಕೊಂಡಿದೆ. ಆದಾಗ್ಯೂ ಈ ದಿವಸ ಈ ಪ್ರಶ್ನೆಯನ್ನು ಕೇವಲ ಆ ಸಂಸ್ಥೆಯೊಂದೇ ಆಗಲಿ ಅಥವಾ ಸರ್ಕಾರ ಒಂದೇ ಆಗಲಿ ಕುಳಿತು ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಇದರ ತೀರ್ಮಾನದ ಬಗ್ಗೆ ದೇಶ ಮುಂದೆ ಉದ್ಭವಿಸತಕ್ಕ ಪ್ರಶ್ನೆಗಳು ಅನೇಕವಾಗಿರುತ್ತವೆ. ಈಗಾಗಲೇ ನಮ್ಮ ಸರ್ಕಾರ ಅಪಾರವಾಗಿ ಹಣವನ್ನು ಪ್ರಥಮ ಪಾಂಚವಾರ್ಷಿಕ ಯೋಜನೆಗಾಗಿ ಖರ್ಚು ಮಾಡಬೇಕಾಗಿ ಬಂತು; ಹಾಗೆ ಖರ್ಚುಮಾಡಿದ್ದೂ ಆಯಿತು. ಆದರೆ ಈಗ ಮತ್ತೆ ದ್ವಿತೀಯ ಪಂಚವಾರ್ಷಿಕ ಯೋಜನೆಗಾಗಿ ನಾವು ವಿಶೇಷವಾಗಿ ಹಣವನ್ನು ಒದಗಿಸಬೇಕಾಗಿದೆ. ಮೇಲಾಗಿ ನಮ್ಮ ಸಂಸ್ಥಾನ ಒಂದು ಮಾಡಲ್ ಸ್ಟೇಟ್. ಇದರ ವೆಚ್ಚಯಾವಾಗ್ಗೂ ಜಾಸ್ತಿಯಾಗಿಯೇ ಇರುತ್ತದೆ. ಪದೇ ಪದೇ ಅನೇಕ ಸದಸ್ಯರುಗಳು ನಮಗೆ ಆಸ್ಪತ್ರೆಗಳನ್ನು ಕೊಡಿ, ಸ್ಕೂಲುಗಳನ್ನು ಕೊಡಿ ಎಂಬುದಾಗಿ ಒತ್ತಾಯಪಡಿಸುತ್ತಲೇ ಇರುತ್ತಾರೆ. ಹೀಗೆ ಅವರು ಒತ್ತಾಯಪಡಿಸತಕ್ಕದ್ದೂ ಕೂಡ ಸ್ವಾಭಾವಿಕವಾದದ್ದೇ ಸರಿ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ತಾವೀಗ ಈ ಹೆಂಡ, ಸಾರಾಯಿಗಳನ್ನು ಜನರಿಗೆ ಕುಡಿಸಿ, ಅವರಿಂದ ದುಡ್ಡನ್ನು ತೆಗೆದುಕೊಂಡು ಹೋಗಿ ಆ ದುಡ್ಡಿನಿಂದ ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯನ್ನು ಜಾರಿಗೆ ತರಬೇಕೆಂದು ಉದ್ದೇಶಪಟ್ಟಿದ್ದೀರೊ ?

ಶ್ರೀ ಟಿ. ಚನ್ನಯ್ಯ.—ನಾನು ಆ ರೀತಿ ಹೇಳಲಿಲ್ಲ. ತಾವು ಬೇರೆಯಲ್ಲ ಸರ್ಕಾರ ಬೇರೆಯಲ್ಲ. ಈ ಕೆಲಸವನ್ನು ಎಲ್ಲರೂ ಒಟ್ಟುಗೂಡಿ ಮಾಡಬೇಕಾಗಿದೆ. ಈ ಸಭೆಯಲ್ಲಿರತಕ್ಕ ಮಾನ್ಯ ಸದಸ್ಯರೆಲ್ಲರೂ ಸಮಾಧಾನದಿಂದ ಕುಳಿತುಕೊಂಡು ನಿಧಾನವಾಗಿ ಮಾತನಾಡಿ ಇದರ ಬಗ್ಗೆ ಒಂದು ಸಮಾಧಾನಕರವಾದ ತೀರ್ಮಾನವನ್ನು ಕೈಗೊಳ್ಳಬೇಕಾಗಿದೆ. ಆದಕಾರಣ ಇದು ಕೇವಲ ಸರ್ಕಾರದವರೊಬ್ಬರೇ ಮಾಡತಕ್ಕಂಥ ಕೆಲಸವಲ್ಲ. ಈ ತೀರ್ಮಾನದ ಭಾರ ತಮ್ಮೆಲ್ಲರಮೇಲೂ ಸಹ ಬಿದ್ದಿರುತ್ತದೆ. ತಾವು ಈ ವಿಚಾರವನ್ನು ಪಾರ್ಟಿ

ಮೀಟಿಂಗ್‌ನಲ್ಲೂ ತರಬಹುದು. ಅಲ್ಲಿ ಬಂದು ಎಲ್ಲರೂ ಒಂದು ಏಕಾಭಿಪ್ರಾಯದ ತೀರ್ಮಾನಕ್ಕೆ ಬಂದರೆ ಆಗ ಇದನ್ನು ಸುಲಭವಾಗಿ ಬಗೆಹರಿಸಬಹುದು.

ಕಳೆದ ಬಡ್ಜೆಟ್ಟಿನಲ್ಲಿ ನಮಗೆ ನಾಲ್ಕು ಕೋಟಿ ರೂಪಾಯಿಗಳು ಖೋತಾ ಆಗಿತ್ತು. ಈ ಅಂಶವನ್ನು ತಾವೆಲ್ಲರೂ ಮನಗಂಡಿದ್ದೀರಿ. ನಾವೀಗ ಈ ಪಾನನಿರೋಧವನ್ನು ಸಂಸ್ಥಾನಾದ್ಯಂತವೂ ಜಾರಿಗೆ ತಂದ ಪಕ್ಷದಲ್ಲಿ ಆಗ ಇದರಿಂದ ಬರುತ್ತಿದ್ದಂಥ ಸುಮಾರು ಒಂದೂ ಮುಕ್ಕಾಲು ಕೋಟಿ ರೂಪಾಯಿಗಳು ಖೋತ ಬೀಳುವುದರಿಂದ ಬಡ್ಜೆಟ್ ಪರಿಸ್ಥಿತಿ ಇನ್ನೂ ಅಧಿಕ ಡಿಫಿಸಿಟ್ ಆಗಲು ಅವಕಾಶವಾಗುತ್ತದೆ. ನಮ್ಮ ಡಿಫಿಸಿಟ್ ಸುಮಾರು ಆರು ಕೋಟಿಗೂ ಮೀರಿ ಹೋಗಬಹುದು. ಈ ಅಂಶವನ್ನೂ ಸಹ ತಾವೆಲ್ಲರೂ ಆಲೋಚನೆ ಮಾಡಬೇಕಾದ್ದಾಗಿದೆ. ಹೀಗೆ ಖೋತಾ ಬೀಳಬಹುದಾದ ಮೊಬಲಗನ್ನು ಭರ್ತಿಮಾಡಲು ಮತ್ತೆ ಯಾವ ದಾರಿಗಳಿವೆ. ಅದನ್ನು ಹೇಗೆ ಭರ್ತಿಮಾಡಿಕೊಳ್ಳಬೇಕು ಎಂಬುದನ್ನೆಲ್ಲಾ ಆಲೋಚನೆ ಮಾಡಿ ಇದನ್ನು ತೀರ್ಮಾನ ಮಾಡತಕ್ಕ ಜವಾಬ್ದಾರಿ ಈ ಮಾನ್ಯ ಸಭೆಯ ಮೇಲೆ ಬಿದ್ದಿರುತ್ತದೆ ಆದರೆ ಈಗ ಈ ನಿರ್ಣಯವನ್ನು ತಂದಿರತಕ್ಕಂಥ ಮಾನ್ಯ ಸದಸ್ಯರೂ ಮತ್ತು ಆ ಪ್ರದೇಶದಿಂದ ಬಂದಿರತಕ್ಕಂಥ ಇತರೇ ಕೆಲವು ಜನ ಮಾನ್ಯ ಸದಸ್ಯರೂ ಸಹ ವಾಸ್ತವವಾಗಿಯೂ ಅಲ್ಲಿ ಈ ಪಾನನಿರೋಧವನ್ನು ತೆಗೆದು ಹಾಕಬೇಕೆಂದು ಜನರು ಹೇಳಿದ್ದರಿಂದ ಇವರು ಅಲ್ಲಿಯ ಸನ್ನಿವೇಶವನ್ನು ಅರಿತುಕೊಂಡು ಅದಕ್ಕೆ ತಕ್ಕ ಹಾಗೆ ಇದನ್ನು ತಂದಿದ್ದಾರೆ.

Sri A. G. RAMACHANDRA RAO (Minister for Law and Education).—Only one information I wish to supplement, with the permission of the Chair. This is "Second Five-Year Plan—Forecast of Financil Resources" Page 1.

> "The above figures show an overall deficit of revenue account as well as outside the revenue account a sum of Rs. 12·35 crores in the Second Plan period."

Sri V. VENKATAPPA (Channapatna).—Does that information give a forecast of the budget ?

Sri A. G. RAMACHANDRA RAO.—Not of the budget. It is a forecast of the financial resources during the Second Plan period.

ಶ್ರೀ ಕೆ. ಪುಟ್ಟಸ್ವಾಮಿ.—ಸಾವಿರ ರೂಪಾಯಿಗಳ ಸಾಲ ನಾನೊಬ್ಬ ಲೋಲ,—ಎಂಬಂತೆ ಇದನ್ನು ಮಾಡಿಬಿಡಿ.

ಶ್ರೀ ಟಿ. ಚನ್ನಯ್ಯ.—ಪ್ರತಿಯೊಂದು ಸ್ಟೇಟಿನಲ್ಲೂ ಕಾಲಕ್ರಮದಲ್ಲಿ ಇದನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂಬ ಉದ್ದೇಶವಿದೆ. ಆದರೆ ಒಬ್ಬರು ಮಾನ್ಯ ಸದಸ್ಯರು ಪುನಃ ಈ ಕುಡಿತವನ್ನು ಕೆಲವು ಕಡೆ ಜಾರಿಗೆ ತರಬೇಕೆಂದು ಈ ನಿರ್ಣಯವನ್ನು ತಂದಿದ್ದಾರೆ. ಆದರೆ ನಮ್ಮ ಸರ್ಕಾರ ಈ ಕುಡಿತದ ಪದ್ಧತಿಯನ್ನೇ ಸಂಪೂರ್ಣವಾಗಿ ಕಾಲಕ್ರಮದಲ್ಲಿ ತೊಡೆದು ಹಾಕಬೇಕೆಂಬ ತೀರ್ಮಾನಕ್ಕೆ ಕಟ್ಟುಬಿದ್ದಿರುವಾಗ ನಾವು ಹೀಗೆ ಇದನ್ನು ಪುನಃ ಜಾರಿಗೆ ತರಲು ಅನುಮತಿ ಕೊಡುವುದಾದರೆ ಅದು ರಿಟ್ರೋಗ್ರೇಡು ಪಾಲಿಸಿ ಆಗುತ್ತದೆ. ಈಗಾಗಲೇ 6-7 ವರ್ಷಗಳಿಂದ ನಮ್ಮ ಸರ್ಕಾರ ದೇಶದ ಅನೇಕ ಭಾಗಗಳಲ್ಲಿ ಈ ಪಾನ ನಿರೋಧವನ್ನು ಜಾರಿಗೆ ತಂದಿದೆ. ಆದಷ್ಟು ಬೇಗ ಇದನ್ನು ಇನ್ನೂ ಹೆಚ್ಚು ಹೆಚ್ಚು ಪ್ರದೇಶದಲ್ಲಿ ಜಾರಿಗೆ ತರಬೇಕೆಂಬ ಉದ್ದೇಶವನ್ನಿಟ್ಟುಕೊಂಡಿರುವಾಗ ಹೀಗೆ ಈ ದಿವಸ ಈ ನಿರ್ಣಯಕ್ಕೆ ಬೆಂಬಲ ಕೊಟ್ಟಿದೆ ಅದು ರಿಟ್ರೋಗ್ರೇಡ್ ಪಾಲಿಸಿ ಅಲ್ಲದೆ ಅದನ್ನು ಮತ್ತೇನೆಂದು ಕರೆಯಬೇಕು ? ಆದುದರಿಂದ ಈ ನಿರ್ಣಯವನ್ನು ಸರ್ಕಾರದವರು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅಷ್ಟೇ ಅಲ್ಲದೇ ಈ ವಿಚಾರ ನಮ್ಮ ರಾಜ್ಯಾಂಗದಲ್ಲಿ ಹೇಳಿರತಕ್ಕ directive principlesಗೂ ನೀತಿಗೂ ಕೂಡ ವಿರೋಧವಾಗಿದೆ. ಆದರೆ ಆ ನಮ್ಮ ಕೆ. ಜಿ. ಎಫ್. ಪ್ರದೇಶದಲ್ಲಿರತಕ್ಕಂಥ ಕೆಲವು ಸಂಘ-ಸಂಸ್ಥೆಗಳವರು ಈ ಕುಡಿತವನ್ನು ಪುನಃ ಅಲ್ಲಿ ಜಾರಿಗೆ ತರುವಂತೆ ಸರ್ಕಾರಕ್ಕೆ ಒತ್ತಾಯ ಮಾಡಬೇಕೆಂದು ಹೇಳಿರಬಹುದು. ಅದಕ್ಕನುಸಾರವಾಗಿ ಈ ನಮ್ಮ ಮಾನ್ಯ ಸದಸ್ಯರು ಈ ನಿರ್ಣಯವನ್ನು ತಂದಿರಬಹುದು. ನಿಜ. ಆದರೆ ಹೀಗೆ ನಾವು ಒಂದೊಂದು ಪ್ರದೇಶಕ್ಕೆ ಒಂದೊಂದು ನೀತಿಯನ್ನು ಅನುಸರಿಸುತ್ತಾ ಹೋಗುವುದು ಸರಿಯಾದದ್ದಲ್ಲ ಮತ್ತು ಆ ರೀತಿ ಮಾಡತಕ್ಕದ್ದು ಕೂಡ ನ್ಯಾಯವಾದದ್ದಲ್ಲ. ಮೈಸೂರು ಸಂಸ್ಥಾನದಲ್ಲೆಲ್ಲಾ ಈ ಪಾನ ನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಎಲ್ಲ ಮಾನ್ಯ ಸದಸ್ಯರೂ ಒತ್ತಾಯಪಡಿಸುತ್ತಿರುವಾಗ ಕೇವಲ ಒಬ್ಬಿಬ್ಬರು ಮಾನ್ಯ ಸದಸ್ಯರು ಅದನ್ನು ಪುನಃ ಜಾರಿಗೆ ತರಬೇಕೆಂದು ಕೇಳಿದರೆ ಇದನ್ನು ಒಪ್ಪಿಕೊಳ್ಳುವುದಕ್ಕೆ ಖಂಡಿತ ಸರ್ಕಾರ ಇಷ್ಟಪಡುವುದಿಲ್ಲ. ಇದು ಸಾಧ್ಯವಿಲ್ಲದ ವಿಚಾರ. ಆದರೆ ವಿರೋಧಪಕ್ಷದ ಮಾನ್ಯ ನಾಯಕರಾದ ಶ್ರೀ ಮಹಮ್ಮದ್ ಇಮಾಂರವರು ಈ ಹಿಂದೆ ಈ ಪಾನ ನಿರೋಧ ಸಮಿತಿಯ ಅಧ್ಯಕ್ಷರಾಗಿದ್ದರು. ಆಗ್ಗೆ ಅವರು ಈ ಪಾನ ನಿರೋಧವನ್ನು ದೇಶಾದ್ಯಂತವೂ ಜಾರಿಗೆ ತರತಕ್ಕ ಬಗ್ಗೆ ಒಂದು ಕ್ರಮವರಿತು ವರ್ಷಕ್ಕೆ ಇಷ್ಟು ಅಂಗಡಿಗಳಂತೆ ಕಮ್ಮಿ ಮಾಡುತ್ತಾ ಹೋಗಿ ಕೊನೆಗೆ ಇದನ್ನು ಸಂಪೂರ್ಣವಾಗಿ ದೇಶಾದ್ಯಂತವೂ ಜಾರಿಗೆ ತರಬೇಕೆಂಬುದಾಗಿ ಅವರೇ ಹೇಳಿರುತ್ತಾರೆ. ಹಾಗೆ ಅವರು ಆ ದಿವಸ ತೀರ್ಮಾನ ಹೇಳಿ ಈ ಹೊತ್ತು ಅವರೇ ಈ ಕುಡಿತವನ್ನು ಪುನಃ ಜಾರಿಗೆ ತರಬೇಕೆಂದು ಈ ನಿರ್ಣಯಕ್ಕೆ ಬೆಂಬಲ ಕೊಟ್ಟು ವಾದಿಸಿರತಕ್ಕದ್ದು ಬಹಳ ಆಶ್ಚರ್ಯವಾಗಿದೆ.

Sri K. S. VASAN.—Hon'ble Member Sri Imam, if I remember correct, suggested that a Committee may be appointed to enquire into the working of prohibition in K. G. F. with a view to take effective steps. (*Interruption*). It may not be necessary in your opinion. It is that Sri Imam said.

ಶ್ರೀ ಟಿ. ಚನ್ನಯ್ಯ.—ಆದರೆ ದುರದೃಷ್ಟವಶಾತ್ ಆ ಇಬ್ಬರು ಮಾನ್ಯ ಸದಸ್ಯರೂ ಈಗ ಸಭೆಯಲ್ಲಿ ಹಾಜರಿರುವುದಿಲ್ಲ. ಎಲ್ಲಿಯೋ ಹೋಗಿರುತ್ತಾರೆ. ಆದರೆ ಅವರು ವಿರೋಧಪಕ್ಷದ ಅಧ್ಯಕ್ಷರಾಗಿ ಆ ರೀತಿ ಮಾತನಾಡಿದ್ದರೆ—ಅವರ ಪಕ್ಷಕ್ಕೇ ಸೇರಿರತಕ್ಕಂಥ ಮತ್ತೊಬ್ಬ ಸದಸ್ಯರಾದ ಶ್ರೀ ಬಿ. ಹುಚ್ಚೇಗೌಡರು ಈ ಪಾನ ನಿರೋಧವನ್ನು ಆದಷ್ಟು ಬೇಗ ಸಂಸ್ಥಾನಾದ್ಯಂತವೂ ಜಾರಿಗೆ ತರಬೇಕೆಂದು ಹೇಳಿದ್ದಾರೆ. ಆದರೆ

(ಶ್ರೀ ಟಿ. ಚನ್ನಯ್ಯ.)

ಆ ಪಕ್ಷದ ನಾಯಕರು ಇದನ್ನು ಕೆ. ಜಿ. ಎಫ್. ನಲ್ಲಿ ನಿಲ್ಲಿಸಬೇಕೆಂದು ಹೇಳಿದ್ದಾರೆ. ಹೀಗೆ ಅವರು ನಿಜವಾಗಿಯೂ ಒಂದು ಪಾರ್ಟಿಯ ನಾಯಕರೇ ಎಂದು ಕೇಳುತ್ತೇನೆ? ಆದರೆ ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರಂಥ. . . .

Sri Mulka GOVINDA REDDY.—I want to clarify that position. I do not belong to Praja Socialist Party; I belong to Socialist Party.

ಶ್ರೀ ಟಿ. ಚನ್ನಯ್ಯ.—ತಾವಾದರೂ ಹಾಗೆ ಹೇಳಬಹುದೇ? ನಿಮ್ಮಂಥ ಯುವಕರು ಇದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಹೀಗಿರುವಾಗ ಕೆ.ಜಿ.ಎಫ್. ಪ್ರದೇಶದಲ್ಲಿ ಮಾತ್ರ ಇದನ್ನು ತೆಗೆದುಹಾಕಿ ಬಿಡಿ ಎಂದು ಹೇಗೆ ಹೇಳುತ್ತೀರಿ?

Sri Mulka GOVINDA REDDY.—We are not faddists like you people. We are realists. We want you to examine the position, and then take a course of action.

ಶ್ರೀ ಟಿ. ಚನ್ನಯ್ಯ.—ಸುಮ್ಮನೆ ನಾವು ಮಾತನಾಡುವುದು. ಒಳ್ಳೆಯದು ಇರಲಿ, ಕೆಟ್ಟದ್ದೇ ಇರಲಿ ಎಲ್ಲದಕ್ಕೂ ವಿರೋಧವಾಗಿ ಮಾತನಾಡಬೇಕೆಂಬುದೇ ನಿಮ್ಮ ಅಭಿಪ್ರಾಯ. ನಿಮ್ಮ ಪಾರ್ಟಿಯಲ್ಲಿಯೇ ಈ ವಿಚಾರದಲ್ಲಿ ಒಂದು ಅಭಿಪ್ರಾಯವಿಲ್ಲ. ಶ್ರೀ ಹುಚ್ಚೇಗೌಡರು ಇದು ಬೇಡ ಎನ್ನುವುದು, ನೀವು ಬೇಕು ಎನ್ನುವುದು, ಈ ರೀತಿ ಮಾತನಾಡಿದರೆ ಹೇಗೆ?

Sri Mulka GOVINDA REDDY.—I may throw out a challenge to the Hon'ble Minister that there is difference of opinion even among Congressmen on this subject, as in the case of so many other vital matters. The Congress Committee in Kolar Gold Fields has passed a resolution on this subject.

ಶ್ರೀ ಟಿ. ಚನ್ನಯ್ಯ.—ನಮ್ಮ ಕಾಂಗ್ರೆಸ್ ಪಾರ್ಟಿಯಲ್ಲಿ ಇದಕ್ಕೆ ಪೂರ್ಣ ಬೆಂಬಲ ಇದೆ. Total Prohibition ಮೈಸೂರು ಸಂಸ್ಥಾನದಲ್ಲಿ ಜಾರಿಗೆ ತರಬೇಕೆಂಬುದೇ ಎಲ್ಲರ ಅಂತಿಮ ಗುರಿಯಾಗಿದೆ. ಈಗ ಮಾತನಾಡಿರುವುದನ್ನು ನೋಡಿದರೆ ಎಲ್ಲರೂ ಇದೇ ಉದ್ದೇಶಪಟ್ಟಿದ್ದಾರೆ ಎಂಬುದು ಗೊತ್ತಾಗುತ್ತದೆ. ಈಗ illicit distillation ಮತ್ತು ಕೆಲವು ಸ್ಥಳಗಳಲ್ಲಿ ಅಕ್ರಮಗಳು ನಡೆಯುತ್ತಿರುವುದನ್ನು ತಡೆಗಟ್ಟಲು ಪೋಲೀಸ್ ಇಲಾಖೆಯವರು ಸಾಕಾದಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಅದರಲ್ಲೂ Public Co-operation ಬೇಕು ಎಂದು ಇದಕ್ಕೆ ವಿರೋಧವಾಗಿ ಮಾತನಾಡಿದ ಶ್ರೀ ಇಮಾಂ ಸಾಹೇಬರು "Public Co-operation ಏತಕ್ಕೆ ಬೇಕು? ಸರ್ಕಾರದವರು ಮಾಡುವ ಕೆಲಸಗಳನ್ನು ನಿಷ್ಠೆಯಿಂದ ಮಾಡಿದರೆ ಇದನ್ನು ಯಶಸ್ವಿಯಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ" ಎಂದು ಹೇಳಿದರು.

Sri R. ANANTARAMAN (Chamarajapet).—I want this information. The Hon'ble Member said that Kolar Taluk Congress Committee had passed a resolution requesting the Government to scrap prohibition. Is it true? I learn it is not so.

Sri T. CHANNIAH.—I have not received any communication in the matter.

Sri H. C. LINGA REDDY.—The Kolar Taluk Congress Committee has not passed any such resolution.

Sri K. S. VASAN.—The Congress Committee has passed such a resolution urging upon the Government to revise their decision in regard to prohibition.

Mr. SPEAKER.—The Hon'ble Minister says that he has not received it.

Sri Mulka GOVINDA REDDY.—The Minister himself has answered a question in the affirmative on this subject on the floor of this House.

ಶ್ರೀ ಟಿ. ಚನ್ನಯ್ಯ.—ಶ್ರೀ ಇಮಾಂ ಸಾಹೇಬರು ಮತ್ತು ಇನ್ನು ಕೆಲವು ಮಾನ್ಯಸದಸ್ಯರು 'Public Co-operation ಏತಕ್ಕೆ? ಪಾನನಿರೋಧ ಪದ್ಧತಿಯನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರುವ ವಿಷಯದಲ್ಲಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಪೋಲೀಸರು ಸರಿಯಾದ ರೀತಿಯಲ್ಲಿ ಕೆಲಸಮಾಡುತ್ತಿಲ್ಲ, ಎಂದು ಹೇಳಿದರು. ನಾನು ವೈಯಕ್ತಿಕವಾಗಿ ತಿಳಿದುಕೊಂಡಿರುವ ರೀತಿ, ಕಳ್ಳಭಟ್ಟಿ ಸಾರಾಯಿ ತಯಾರು ಮಾಡತಕ್ಕ ಪ್ರದೇಶದಲ್ಲೂ, ಮತ್ತು ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುವ ಪ್ರದೇಶದಲ್ಲೂ ಈ ರೀತಿ ಮಾಡುತ್ತಿರುವುದು ಕೆಲವು ಸದಸ್ಯರಿಗೆ, ಮತ್ತು ಆ ಪ್ರದೇಶಗಳಲ್ಲಿ ವಾಸಮಾಡುವ ಖಾಸಗೀ ದೊಡ್ಡ ಮನುಷ್ಯರಿಗೆ ಗೊತ್ತಿದ್ದರೂ ಇಂತಹ ಸ್ಥಳಗಳಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರುಮಾಡುತ್ತಾರೆಂದು ತಿಳಿದು ಅವರು ಪೋಲೀಸಿನವರಿಗೋ ಅಥವಾ ಸರ್ಕಾರೀ ಅಧಿಕಾರಿಗಳಿಗೋ ಆ ವಿಷಯದಲ್ಲಿ information ಕೊಟ್ಟ ಪಕ್ಷದಲ್ಲಿ, ಕಳ್ಳಭಟ್ಟಿ ಸಾರಾಯಿ ಮಾಡುವವರು ತಮ್ಮ ಮೇಲೆ ಆರೋಪಣೆ ಮಾಡಿ, ತೊಂದರೆ ಕೊಡಬಹುದು, ಆದ್ದರಿಂದ ತಾವು ಏತಕ್ಕೆ ನಿಷ್ಠೂರಕ್ಕೆ ಒಳಗಾಗಬೇಕು ಎಂದು ಭಾವಿಸುತ್ತಾರೆ. ಈ ರೀತಿ ಕೆಲವರು ಅಭಿಪ್ರಾಯಗಳನ್ನು ಇಟ್ಟುಕೊಂಡು ಆಯಾ ಸ್ಥಳಗಳಲ್ಲಿ ಸರ್ಕಾರದ ಗಮನಕ್ಕಾಗಲಿ ಪೋಲೀಸ್ ಅಧಿಕಾರಿಗಳ ಗಮನಕ್ಕಾಗಲಿ ತರದೆ ಸುಮ್ಮನೆ ಇದ್ದುಬಿಟ್ಟಿದ್ದಾರೆ. ಯಾವಾಗ ಕಳ್ಳಭಟ್ಟಿ ಸಾರಾಯಿ ತಯಾರುಮಾಡುತ್ತಾರೆ, ಮತ್ತು ಮಾರಾಟಮಾಡುತ್ತಾರೆ ಎಂದ ತಿಳಿದು ಬಂದ ಕೂಡಲೆ ತಿಳಿದಂಥ ಮಹನೀಯರು ತಕ್ಷಣ ಹಾಗೆಯೇ ಪೋಲೀಸ್ ಅಧಿಕಾರಿಗಳಿಗೆ ಅಥವಾ ಸಂಬಂಧಪಟ್ಟ ಆಡಳಿತ ಅಧಿಕಾರಿಗಳಿಗೆ ಅವರನ್ನು ಹಿಡಿಯುವಂತೆ ತಿಳಿಸಬೇಕು. ಸರ್ಕಾರ ಮಾಡುವ ಕೆಲಸಕ್ಕೆ ಜನರು ಸಹಕಾರಕೊಟ್ಟ ಪಕ್ಷದಲ್ಲಿ ನಿಜವಾಗಿ ಬಹಳಮಟ್ಟಿಗೆ ಇದನ್ನು ತಡೆಗಟ್ಟುವುದಕ್ಕೆ ಅವಕಾಶವಾಗುತ್ತದೆ. ಅನೇಕರು ಈ ಜವಾಬ್ದಾರಿ ವಹಿಸಿಕೊಳ್ಳುವುದಕ್ಕೆ ಹಿಂದೆಗೆಯುತ್ತಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಈ ಬಗ್ಗೆ ಕೋರ್ಟಿಗೆ ಪೋಲೀಸಿನವರು ತೆಗೆದುಕೊಂಡು

ಹೋಗತಕ್ಕ ಕೇಸುಗಳಲ್ಲಿ ¾ ಭಾಗ ರದ್ದು ಆಗುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಕೇಸುಗಳು ಯಾವ ರೀತಿ ಇರುತ್ತದೋ ಅದರಮೇಲೆ ಹೋಗುತ್ತದೆ. Report on Prohibition Cases ನೋಡಿದರೆ, ಹೆಚ್ಚಾಗಿ cases ಪೋಲೀಸಿನವರು detect ಮಾಡಿ ಕೋರ್ಟು ಗಳಲ್ಲಿ launch ಮಾಡಿದುದರಿಂದ, fines ಹಾಕಿರುವುದು ಗೊತ್ತಾಗುತ್ತದೆ. Penal Code ನೂರಾರು ವರ್ಷಗಳಿಂದ ಇಂಡಿಯಾ ದೇಶದಲ್ಲಿದ್ದರೂ ಕೂಡ ಖೂನಿಗಳು ನಡೆಯುವುದು, ಹೊಡೆದಾಟಗಳು ನಡೆಯುವುದು, ಇದ್ದೇ ಇದೆ. ಇದನ್ನು ತಪ್ಪಿಸುವುದು ಕಷ್ಟವಾಗುತ್ತದೆ. ಆ ಸ್ವಭಾವ ಬಂದಿರತಕ್ಕ ಮನುಷ್ಯನು ಸಾಯುವ ತನಕ ಅದನ್ನು ಬಿಡುವುದಿಲ್ಲ. ಆದ್ದರಿಂದ Public ಇದರಮೇಲೆ ಧೈರ್ಯ ತೆಗೆದುಕೊಂಡು ಇದನ್ನು ತಡೆಗಟ್ಟುವುದಕ್ಕೆ ಅಲ್ಲಿ ವಾಸಮಾಡುವ ಪ್ರತಿಯೊಬ್ಬ ಖಾಸಗೀ ದೊಡ್ಡ ಮನುಷ್ಯರೂ, ಊರಿನವರೂ, ಇತರರೂ ಎಲ್ಲರೂ ಸೇರಿಕೊಂಡು ಇದನ್ನು ನಿಲ್ಲಿಸಬೇಕು. ಇದನ್ನು ಒಗ್ಗಟ್ಟಿನಿಂದ ಮಾಡಿದ ಹೊರತು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೂ ಕೂಡ ಸಾಧ್ಯವಾದಷ್ಟು ಪ್ರಯತ್ನಗಳನ್ನು ಮೈಸೂರು ಸರಕಾರದವರು ಪೋಲೀಸಿನ ಮುಖಾಂತರ ಬಂದೋಬಸ್ತು ಮಾಡಿದ್ದಾರೆ. ಆದರೆ ಕೆಲವು ಲೋಪದೋಷಗಳು ಇರಬಹುದು. Public ಸಾಕಾದಷ್ಟು ಸಹಕಾರ ಕೊಟ್ಟರೆ ಧೈರ್ಯದಿಂದ ಈ ಕಾರ್ಯವನ್ನು ನಿಲ್ಲಿಸಬಹುದು. Illicit distillation ಯಾರು ಮಾಡುತ್ತಾರೋ ಅವರಿಗೆ ಶಿಕ್ಷೆ ಕೊಡಬೇಕೆಂದು ಪ್ರಯತ್ನಮಾಡಿದರೆ ನಿಜವಾಗಿ ನಿಲ್ಲುತ್ತದೆ ಎಂದು ನನಗೆ ಭರವಸೆ ಇದೆ. Prohibition ಪೂರ್ಣವಾಗಿ introduce ಮಾಡಬೇಕು ಎನ್ನುವ ವಿಷಯದಲ್ಲಿ ಆಗಲೇ ಹೇಳಿದ್ದೇನೆ. ನಿಜವಾಗಿ ಇದು ಒಂದು ಜಟಿಲ ಪ್ರಶ್ನೆ. ಇದು ಒಂದು ಪಾಲಿಸಿಗೆ ಸಂಬಂಧಪಟ್ಟದ್ದು, ಎಲ್ಲರೂ ಒಪ್ಪಿಮಾಡತಕ್ಕ ವಿಷಯ. ಖಂಡಿತವಾಗಿ ಸರ್ಕಾರಕ್ಕೆ ಹೆಚ್ಚು ಸಹಾನುಭೂತಿ ಇದೆ. Prohibition Enquiry Committee ಯ ಶಿಫಾರ್ಸನ್ನು ಸರ್ಕಾರದವರು ಯೋಚನೆಮಾಡಿ ಯಾವ ರೀತಿ ಸರ್ಕಾರಕ್ಕೆ ಉಂಟಾಗುವ ಲುಕ್ಸಾನನ್ನು ಭರ್ತಿಮಾಡತಕ್ಕದ್ದು ಎಂಬ ವಿಷಯವನ್ನು ಎತ್ತಿದ್ದೇವೆ. ಸರ್ಕಾರಕ್ಕೆ ಅವರಿಂದ ಯಾವ ಉತ್ತರವೂ ಬಂದಿಲ್ಲ. ಎಲ್ಲಾ ಮಾನ್ಯಸದಸ್ಯರೂ ಯಾವ ರೀತಿ ಇದನ್ನು ಪೂರ್ಣವಾಗಿ ಜಾರಿಗೆ ತರಬೇಕು ಎಂದು ಅಭಿಪ್ರಾಯ ಇಟ್ಟುಕೊಂಡಿದ್ದಾರೋ ಅಷ್ಟೇಮಟ್ಟಿಗೆ ಸರ್ಕಾರಕ್ಕೂ ಅಭಿಪ್ರಾಯವಿದೆ. ಇದನ್ನು ಯಾವ ರೀತಿ implement ಮಾಡಬೇಕೆಂಬುದೇ ಸರ್ಕಾರಕ್ಕೆ ಈಗಿರುವ ಪ್ರಶ್ನೆ. ಸಾಧ್ಯವಾದಷ್ಟು ಮಟ್ಟಿಗೆ ಸರ್ಕಾರದವರು ಸರ್ವಪ್ರಯತ್ನಗಳನ್ನೂ ಮಾಡುತ್ತಾರೆಂದು ಹೇಳುತ್ತೇನೆ. ಮತ್ತು ಸರ್ಕಾರದವರು ಸಾಕಾದಷ್ಟು ಪ್ರಯತ್ನಗಳನ್ನು ಮಾಡಿ illicit distillation ಮತ್ತು ಅಕ್ರಮಗಳು ನಡೆಯುವ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುತ್ತಾರೆ. ಶ್ರೀ ಸಿಡ್ನಿ ಎ. ಥಾಮಸ್‌ರವರು ಹೇಳಿದ ಹಾಗೆ K.G.F. ನಲ್ಲಿ ಇದರ ಬಗ್ಗೆ ತಕ್ಕ ಬಂದೋಬಸ್ತು ಮಾಡಬೇಕು ಎನ್ನುವ ವಿಷಯವನ್ನು ಒಪ್ಪಿಕೊಳ್ಳುತ್ತೇನೆ, ಖಂಡಿತವಾಗಿ ಖಾಸಗೀ ಮನುಷ್ಯರೂ ಮಾನ್ಯಸದಸ್ಯರೂ ಇದರಲ್ಲಿ ಸಹಕರಿಸಿದರೆ ಹೆಚ್ಚಿನ ರೀತಿಯಲ್ಲಿ ಇದನ್ನು ತಡೆಗಟ್ಟಬಹುದು ಎಂದು ಒಪ್ಪಿಕೊಳ್ಳುತ್ತೇನೆ. Policy ಹೀಗಿರುವುದರಿಂದ ಈಗ ಈ ನಿರ್ಣಯಕ್ಕೆ ಬೆಂಬಲಕೊಡುವುದಕ್ಕಾಗುವುದಿಲ್ಲ. ಮುಂದೆಯೂ ಆಗುವುದಿಲ್ಲ, ಮುಂದಕ್ಕೆ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—What does the Mover of the Resolution say ?

Sri P. M. SWAMIDURAI.—I submitted this resolution to the Hon'ble House to voice out the consensus of feelings of Kolar Gold Fields with regard to prohibition. It is nothing more or less. But watching the trend of the opinion of the majority of the members of this Hon'ble House, I do not press it.

The resolution was, by leave, withdrawn.

Mr. SPEAKER.—Resolution No. 11. Sri Narasimha Reddy. He is not present. Resolution No. 12. Sri Palaniyappan.

Sri M. PALANIYAPPAN.—In view of the fact that a Bill is coming up before this Assembly on the Re-organisation of States, I do not intend to move my resolution.

Mr. SPEAKER.—Resolution No. 13. Sri Rame Gowda. Hs is not present. Resolution No. 14. Sri Devaraj Urs. He is not present. Resolution No. 15. Sri P. R. Ramaiya.

No. 15. Propagation of Indian Culture,

Sri P. R. RAMAIYA (Basavangudi).—Sir, the resolution is like this :

> "This Assembly is of the opinion that with a view to propagating Indian culture among the people yet greater encouragement be given to learned Kannada and Sanskrit scholars in the State by awarding them honorarium for such work."

This Resolution does not need a lengthy speech. The point is contained in the resolution itself. India's greatness lies in its culture. The ancient culture of India is such that it has attracted the attention of the whole world. Even today, in foreign countries, the savants and scholars have been exploring into the ancient books of